ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ನವೆಂಬರ್ 30, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 198 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999



## ಸಶಕ್ತ ಭಾಷೆಯಾಗಿ ಕನ್ನಡ ಬೆಳೆಯಬೇಕು

ದಾವಣಗೆರೆ, ನ. 29- ಭಾಷೆ ಕಷ್ಟವಾದರೆ, ವಿಷಯವೂ ಕಷ್ಟವೆನಿಸುತ್ತದೆ. ಹಾಗೆಯೇ ಬದಲಾಗುವ ಕಾಲಕ್ಕನುಗುಣವಾಗಿ ಕನ್ನಡ ಸಶಕ್ತ ಭಾಷೆಯಾಗಿ ಬೆಳೆಯಬೇಕೆಂದು ತರಳಬಾಳು ವಿದ್ಯಾಸಂಸ್ಥೆ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್. ಬಿ. ರಂಗನಾಥ್ ಆಶಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಏರ್ಪಡಾಗಿದ್ದ ವಿಶೇಷ ಉಪನ್ಯಾಸ ಹಾಗೂ ಕನ್ನಡ ಕಲರವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾತೃಭಾಷೆಯಲ್ಲಿ ಮಾತ್ರ ಜ್ಞಾನಾರ್ಜನೆ ಸುಲಭವಾಗುತ್ತದೆ. ಮಾತೃಭಾಷೆ ಹೊರತಾದ ಭಾಷಾ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದು ಕಠಿಣ ಎನಿಸುತ್ತದೆ ಎಂದರು.

ಕನ್ನಡ ಅನ್ನದ ಭಾಷೆಯಾಗಿ ಗಟ್ಟಿಯಾಗಿ ಬೆಳೆಯಬೇಕಾದರೆ ಖಾಸಗೀಕರಣ, ಉದಾರೀಕರಣ ನೀತಿಗೆ ತಕ್ಕಂತೆ ಬದಲಾವಣೆ ಹೊಂದಬೇಕಾಗಿದೆ. ಮಾರುಕಟ್ಟೆಯ ಅಗತ್ಯಗಳಿಗೆ ಅನುಗುಣವಾಗಿ ಕೌಶಲ್ಯವು ಕನ್ನಡ ಮಾಧ್ಯಮದಲ್ಲಿ ಸಿಗಬೇಕಾಗಿದೆ ಎಂದರು.

ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ನೀಡುವಂತೆ ನ್ಯಾಯಾಲಯದ ಮನವೊಲಿಸುವ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿದೆ. ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸರ್ಕಾರಕ್ಕಿಂತ ತ್ವರಿತಗತಿಯಲ್ಲಿ ಕರ್ನಾಟಕ ಸಂಭ್ರಮ-50 ಅನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಎಸ್. ಎಂ. ಗೌರಮ್ಮ ಅವರು 'ಕರ್ನಾಟಕ ವೈಭವ' ಕುರಿತು ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿ ನಾಡಿನ ಸಾಹಿತ್ಯದ ಶ್ರೇಷ್ಠತೆಯನ್ನು ಬಿಂಬಿಸುತ್ತದೆ ಎಂದರು.

ಕನ್ನಡ ಕಲಿಕೆ, ಬಳಕೆಯ ಬಗ್ಗೆ ಯಾವುದೇ ಹಿಂಜರಿಕೆಯನ್ನು ಇಟ್ಟುಕೊಳ್ಳಬಾರದು. ಕನ್ನಡ ಭಾಷೆಯ ರಕ್ಷಣೆ ಮತ್ತು ಬಳಕೆ ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯ ಎಂದು ಹೇಳಿದರು.

ಕನ್ನಡ ರಾಜ್ಯದ ಆಡಳಿತ ಭಾಷೆಯಾಗಿದ್ದರೂ ಸಹ ಶಾಲೆಗಳಲ್ಲಿ ಕನ್ನಡ ಭಾಷೆಯ ಕಲಿಕೆ ಕಡ್ಡಾಯವಾಗದಿರುವುದು (4ನೇ ಪುಟಕ್ಕೆ)

## ನ್ಯುಮೋನಿಯಾ : ಎಚ್ಚರ ವಹಿಸಬೇಕು

### ಭ್ರೂಣ ಹತ್ಯೆ ಬಗ್ಗೆ ಕಣ್ಗಾವಲು: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್



ಬೆಂಗಳೂರು, ನ. 29- ಚೀನಾದಲ್ಲಿ ಕಾಣಿಸಿಕೊಂಡಿರುವ ನ್ಯುಮೋನಿಯಾ ಸಾಂಕ್ರಾಮಿಕ ರೋಗದ ಬಗ್ಗೆ ಎಚ್ಚರವಿರಲಿ ಆದರೆ ಆತಂಕಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಇಂದಿಲ್ಲಿ ತಿಳಿಸಿದ್ದಾರೆ.

ವಿಶ್ವಸಂಸ್ಥೆ ಮತ್ತು ಕೇಂದ್ರ ಸರ್ಕಾರ ರೋಗಕ್ಕೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರ ಯಥಾವತ್ ಜಾರಿಗೆ ತರಲಿದೆ ಎಂದರು. ಇದುವರೆಗೂ ಕರ್ನಾಟಕದ ಯಾವುದೇ ಭಾಗದಲ್ಲಿ ಇಂತಹ ಸೋಂಕು ಕಂಡುಬಂದಿಲ್ಲ, ಆದರೆ, ರಾಜ್ಯದ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಸಿದ್ಧತೆ ಮಾಡಿಕೊಳ್ಳುವಂತೆ ಆದೇಶ ಮಾಡಿದ್ದೇವೆ.

ಚೀನಾ ಸೋಂಕು ಮತ್ತು ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ಇಲಾಖಾ ಅಧಿಕಾರಿಗಳ ಜೊತೆ ಸುದೀರ್ಘ ಚರ್ಚೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯುಮೋನಿಯಾ ಬಗ್ಗೆ ಕೆಲವು ಸಂಶಯ ಪ್ರಕರಣಗಳು ವರದಿಯಾಗಿದ್ದು ಅವುಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದರು.

ಕೇಂದ್ರದ ಮಾರ್ಗಸೂಚಿಯಂತೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ವೈದ್ಯರು ಮತ್ತು ಸಿಬ್ಬಂದಿ ಮಾಸ್ಕ್‌ಗಳನ್ನು ಕಡ್ಡಾಯವಾಗಿ ಹಾಕಿಕೊಳ್ಳಬೇಕು,

ಯಾರಲ್ಲಿಯೇ ಜ್ವರ ಕಂಡುಬಂದಲ್ಲಿ ತಕ್ಷಣವೇ ವೈದ್ಯರ ಬಳಿ ತೆರಳಿ ವಿವಿಧ ಪರೀಕ್ಷೆಗೆ ಒಳಪಡಬೇಕು, ಈ ಶೀತ ಜ್ವರ ಸಾಮಾನ್ಯವಾಗಿ ಐದು ದಿನಗಳವರೆಗೆ ಇರುತ್ತದೆ. ಮಕ್ಕಳು ಹಾಗೂ ವೃದ್ಧರು ಎಚ್ಚರಿಕೆಯಿಂದ ಇರಬೇಕು, ಅಲ್ಲದೆ, ಇತರೆ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ.

ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರದಿಂದ ಬಾಯಿ-ಮೂಗು ಮುಚ್ಚಿಕೊಳ್ಳಿ, ಸಾರ್ವಜನಿಕ. ಸ್ಥಳಗಳಲ್ಲಿ ಮಾಸ್ಕ್ ಧರಿಸಿದರೆ ಒಳ್ಳೆಯದು ಹಾಗೆಯೇ ಆಗಿಂದಾಗ್ಗೆ ಸೋಪಿನಿಂದ ಕೈಗಳನ್ನು ಸ್ವಚ್ಛ ಮಾಡಿಕೊಳ್ಳಿ. ಸೋಂಕಿಗೆ ಸಂಬಂಧಿಸಿದಂತೆ ಪ್ರತಿನಿತ್ಯ ಅಧಿಕಾರಿಗಳು ನಿಗಾವಹಿಸಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಿದ್ದಾರೆ. ಇಷ್ಟರ ನಡುವೆಯೂ ಸೋಂಕಿನ ಬಗ್ಗೆ ಎಚ್ಚರವಿರಲಿ, ಆದರೆ, ಆತಂಕ ಬೇಡ ಎಂದರು.

ಮಂಡ್ಯ - ಮೈಸೂರಿನಲ್ಲಿ ಪತ್ತೆಯಾದ ಭ್ರೂಣಹತ್ಯೆ ಪ್ರಕರಣದ (2ನೇ ಪುಟಕ್ಕೆ)

## ಪಿಎಂಜಿಕೆಎವೈ ಯೋಜನೆ ಐದು ವರ್ಷ ವಿಸ್ತರಣೆ

ನವದೆಹಲಿ, ನ. 29 – ಪ್ರತಿ ತಿಂಗಳು 81.35 ಕೋಟಿ ಬಡವರಿಗೆ ತಲಾ 5 ಕೆ.ಜಿ. ಆಹಾರ ಧಾನ್ಯ ನೀಡುವ ಯೋಜನೆಯನ್ನು ಇನ್ನೂ ಐದು ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

**11.80 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಬಡವರಿಗೆ 5 ಕೆ.ಜಿ. ಆಹಾರ ಧಾನ್ಯ**


ಇದರಿಂದ ಬೊಕ್ಕಸಕ್ಕೆ 11.80 ಲಕ್ಷ ಕೋಟಿ ರೂ.ಗಳ ಹೊರೆಯಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (ಪಿ.ಎಂ.ಜಿ.ಕೆ.ಎ.ವೈ.) ಯೋಜನೆಯನ್ನು ಜನವರಿ 1, 2024ರ ನಂತರ ಇನ್ನೂ ಐದು ವರ್ಷಗಳ ಕಾಲ ವಿಸ್ತರಿಸಲಾಗಿದೆ ಎಂದು ಸಂಪುಟ ಸಭೆಯ ನಂತರ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ. ಈ ಹಿಂದೆ ಡಿಸೆಂಬರ್ 31, 2023ರ ಅಂತ್ಯದವರೆಗೆ ಈ ಯೋಜನೆ ವಿಸ್ತರಿಸಲಾಗಿತ್ತು.

ಜನರ ಕಲ್ಯಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವರಿಗೆ ಕಡಿಮೆ ಹೊರೆಯಲ್ಲಿ ಆಹಾರ ಧಾನ್ಯ ಲಭ್ಯವಾಗುವಂತೆ ಮಾಡಲು (4ನೇ ಪುಟಕ್ಕೆ)


11ನೇ ವರ್ಷದ ಪುಣ್ಯಸ್ಮರಣೆ



ಜನನ : 11.08.1928 ಮರಣ : 30.11.2012

ದಿ|| ಶ್ರೀ ಬಿ. ಮೈಲಪ್ಪನವರು
ನಿವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್
ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಭಗವಂತನಲ್ಲಿ ನಿಮ್ಮ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿ ಇರುವ,
ಪತ್ನಿ : ಶ್ರೀಮತಿ ಜಿ. ನಾಗರತ್ನಮ್ಮ ಮತ್ತು ಮಕ್ಕಳು,
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಹಾಗೂ ಬೈರಜ್ಜರ ಮನೆತನದವರು. 08192 260443


## ಕಟ್ಟಡ ಕಾರ್ಮಿಕರಿಗೆ ವಿಶಿಷ್ಟ ಗುರುತು ಕಡ್ಡಾಯ

ನವದೆಹಲಿ, ನ. 29 – ದೇಶಾದ್ಯಂತ ಇರುವ ಎಲ್ಲಾ ಕಟ್ಟಡ ಕಾರ್ಮಿಕರಿಗೆ ವಿಶಿಷ್ಟ ಗುರುತನ್ನು ಕಡ್ಡಾಯಗೊಳಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ವಲಸೆ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕಾರ್ಮಿಕರ ಗುರುತನ್ನು ಆಧಾರ್ ಕಾರ್ಡ್ ಜೊತೆ ಜೋಡಣೆ ಮಾಡಲಾಗುವುದು. ಇದನ್ನು ಇ-ಶ್ರಮ್ ಮಾಹಿತಿಯ ಜೊತೆ ಸೇರ್ಪಡೆ ಮಾಡಲಾಗುವುದು. ಇದರಿಂದ ದೇಶದ ಯಾವುದೇ ಭಾಗಕ್ಕೆ ಕಟ್ಟಡ ಕಾರ್ಮಿಕರು (4ನೇ ಪುಟಕ್ಕೆ)

## ದ್ವೇಷ ಭಾಷಣ ತಡೆಗೆ ಆಡಳಿತಾತ್ಮಕ ವ್ಯವಸ್ಥೆ



ನವದೆಹಲಿ, ಜ. 29 – ದೇಶಾದ್ಯಂತದ ಪ್ರತಿಯೊಂದು ದ್ವೇಷ ಭಾಷಣದ ಪ್ರತ್ಯೇಕ ವಿಚಾರಣೆ ನಡೆಸಲಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಇದಕ್ಕಾಗಿ ಆಡಳಿತಾತ್ಮಕ ವ್ಯವಸ್ಥೆಯೊಂದನ್ನು ಜಾರಿಗೆ ತರಲು ಪರಿಶೀಲಿಸುತ್ತಿರುವುದಾಗಿ ತಿಳಿಸಿದೆ.

ಸುಪ್ರೀಂ ಕೋರ್ಟ್ ಈಗಾಗಲೇ ದ್ವೇಷ ಭಾಷಣವನ್ನು ವ್ಯಾಖ್ಯಾನಿಸಿದೆ. ಈಗ ನ್ಯಾಯಾಲಯದ ನಿರ್ದೇಶನಗಳನ್ನು ಜಾರಿಗೆ ತರಬೇಕಿದೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನ ಹಾಗೂ ಎಸ್.ವಿ.ಎನ್. ಭಟ್ಟಿ ಅವರನ್ನು ಒಳಗೊಂಡ ಪೀಠ ಹೇಳಿದೆ.

ದ್ವೇಷ ಭಾಷಣಗಳ ಕುರಿತ ವೈಯಕ್ತಿಕ ಪ್ರಕರಣಗಳನ್ನು ನೋಡುತ್ತಾ ಹೋದರೆ, ಪ್ರಕರಣಗಳ ಪ್ರವಾಹವೇ ಉಂಟಾಗುತ್ತದೆ. ಇದಕ್ಕಾಗಿ ಆಡಳಿತಾತ್ಮಕ ವ್ಯವಸ್ಥೆ ರೂಪಿಸಬೇಕಿದೆ ಎಂದು ಪೀಠ ತಿಳಿಸಿದೆ.

ಇದೇ ವೇಳೆ ದ್ವೇಷ ಭಾಷಣ ತಡೆಯಲು ನೋಡಲ್ ಅಧಿಕಾರಿಗಳನ್ನು ನೇಮಿಸದ ತಮಿಳುನಾಡು, ಕೇರಳ, ನಾಗಾಲ್ಯಾಂಡ್ ಹಾಗೂ ಗುಜರಾತ್ ರಾಜ್ಯಗಳಿಗೆ ನ್ಯಾಯಾಲಯ ನೋಟಿಸ್‌ಗಳನ್ನೂ ಕಳಿಸಿದೆ.

## 16ನೇ ಹಣಕಾಸು ಆಯೋಗ ಮಾರ್ಗಸೂಚಿಗೆ ಒಪ್ಪಿಗೆ

ನವದೆಹಲಿ, ನ. 29- ಕೇಂದ್ರ ಹಾಗೂ ರಾಜ್ಯಗಳು ತೆರಿಗೆ ಹಂಚಿಕೊಳ್ಳುವ ಪ್ರಮಾಣವನ್ನು ನಿಗದಿ ಪಡಿಸಲು ಸಲಹೆ ನೀಡಲು ಕೇಂದ್ರ ಸರ್ಕಾರ 16ನೇ ಹಣಕಾಸು ಆಯೋಗಕ್ಕೆ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಏಪ್ರಿಲ್ 1, 2026ರಿಂದ ತೆರಿಗೆ ಹಂಚಿಕೆಯ ವರದಿ ಜಾರಿಗೆ ಬರಲಿದೆ.

ಅಕ್ಟೋಬರ್ 31, 2025ರ ಒಳಗೆ ಆಯೋಗ ತನ್ನ ವರದಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ. ವಿಕೋಪ ಪರಿಹಾರ ನಿರ್ವಹಿಸುವ ಕುರಿತೂ ಆಯೋಗ ವರದಿ ನೀಡಲಿದೆ.

## ಶೇ.6.6ಕ್ಕೆ ಇಳಿಕೆಯಾದ ನಿರುದ್ಯೋಗ ಪ್ರಮಾಣ

ನವದೆಹಲಿ, ನ. 29 – ಸೆಪ್ಟೆಂಬರ್ ಚತುರ್ಥದಲ್ಲಿ ನಿರುದ್ಯೋಗ ಪ್ರಮಾಣ ಶೇ.6.6ಕ್ಕೆ ಇಳಿಕೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ನಿರುದ್ಯೋಗ ಪ್ರಮಾಣ ಶೇ.7.2ರಷ್ಟಿತ್ತು ಎಂದು ರಾಷ್ಟ್ರೀಯ ಸಮೀಕ್ಷಾ ವರದಿ (ಎನ್.ಎಸ್.ಎಸ್.ಒ.) ತಿಳಿಸಿದೆ. 15 ವರ್ಷದ ಮೇಲಿನವರ ನಿರುದ್ಯೋಗ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕಳೆದ ವರ್ಷ ಕೊರೊನಾದ ಪರಿಣಾಮಗಳಿಂದ ನಿರುದ್ಯೋಗ ಹೆಚ್ಚಾಗಿತ್ತು ಎಂದು ವರದಿಯಲ್ಲಿ ತಿಳಿಸಲಾಗಿದೆ.


Narayana Health
Take Care

ಶಿವಮೊಗ್ಗದ ಖ್ಯಾತ ಸರ್ಜಿಕಲ್ ಗ್ಯಾಸ್ಟ್ರೋ ತಜ್ಞ ವೈದ್ಯರು ಈಗ ನಿಮ್ಮ ದಾವಣಗೆರೆಯಲ್ಲಿ


ಸಾಮಾನ್ಯ ಲಕ್ಷಣಗಳು
ಗ್ಯಾಸ್ಟ್ರಿಕ್ ಸಮಸ್ಯೆ | ಹೊಟ್ಟೆ ನೋವು | ಅಪೆಂಡಿಕ್ಸ್ | ಪಿತ್ತಕೋಶದಲ್ಲಿ ಕಲ್ಲು | ಹರ್ನಿಯ
ಮಲಬದ್ಧತೆ ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆ | ಮೂಲವ್ಯಾಧಿ | ಫಿಸ್ತೂಲ

ಡಾ. ಸತೀಶ್ ಕುಮಾರ್ ಬಿ. ಎಂ.
ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ ಮತ್ತು ಲಿವರ್ ಟ್ರಾನ್ಸ್‌ಪ್ಲಾಂಟ್




1ನೇ ಡಿಸೆಂಬರ್ '23 (ಪ್ರತಿ ತಿಂಗಳ 1ನೇ ಶುಕ್ರವಾರ) | ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ
ಯುನಿಟಿ ಹೆಲ್ತ್ ಸೆಂಟರ್, ಸ್ಮಾರ್ಟ್ ಪಾಲ್ಸ್ ಕಾನ್ವೆಂಟ್ ರಸ್ತೆ, ದಾವಣಗೆರೆ
ಹೆಚ್ಚಿನ ಮಾಹಿತಿಗಾಗಿ 88844 31388 | 73494 48215
ಸಹ್ಯಾದ್ರಿ, ನಾರಾಯಣ ಆಸ್ಪತ್ರೆ, ಹರಕೆರೆ, ಶಿವಮೊಗ್ಗ







ದಿ|| ಪ್ರೊ|| ಶ್ರೀ ಡಿ.ಬಿ. ನಾಗನಗೌಡ್ರು
ನಿಧನ : 30-11-2018

ಐದನೇ ಪುಣ್ಯಸ್ಮರಣೆ

"ನಮ್ಮ ಬದುಕಿಗೆ ಕ್ರಿಯಾಶೀಲತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲಿ ನಮ್ಮೆಲ್ಲರನ್ನು ಬಿಟ್ಟು ಸ್ವರ್ಗ ಸೇರಿದ ನಿಮ್ಮ ಆತ್ಮ ಮತ್ತೊಮ್ಮೆ ಭೂಮಿತಾಯಿಯ ಮೇಲೆ ಪ್ರತಿಬಿಂಬಿಸಲಿ"
ಸಾರ್ಥಕ ಬದುಕಿನ ಪಯಣದಲ್ಲಿ ನಿಮ್ಮ ಶ್ರಮ ಸಮುದ್ರದ ಅಲೆಗಳಂತೆ ಸದಾ ಹಸನ್ಮುಖಿಯಾಗಿ ರಾರಾಜಿಸಲಿ, ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮೆಲ್ಲರ ಮೇಲಿರಲಿ.
ತಮ್ಮ ನೆನಪಿನಲ್ಲಿ ಪಯಣಿಸುತ್ತಿರುವ :
ಧರ್ಮಪತ್ನಿ : ಶ್ರೀಮತಿ ಪುಷ್ಪ ಡಿ.ಎನ್.
ಪುತ್ರರು- ಸೊಸೆಯಂದಿರು
ಶ್ರೀಮತಿ ಡಾ|| ಅನುಪಮ ಮತ್ತು ಡಾ|| ಕಿರಣ್ ಡಿ.ಎನ್.
ಶ್ರೀಮತಿ ದೀಪಾ ಮತ್ತು ಶ್ರೀ ಶಿವನಗೌಡ ಡಿ.ಎನ್.
ಶ್ರೀಮತಿ ಹರ್ಷಿತಾ ಮತ್ತು ಡಾ|| ಧನಂಜಯ್ ಡಿ.ಎನ್.
ಮೊಮ್ಮಕ್ಕಳು : ದಿಶಾ, ವಿಶ್ವಾಸ್, ಹೃದಯ್, ನೀಲ್, ನಿಧಿ, ಶೌರ್ಯ
ವಿಶ್ವಾಸ್ ಸೈಂಟಿಫಿಕ್ ಕಂಪನಿ, ದಾವಣಗೆರೆ
ವಿಶ್ವಾಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್, ದಾವಣಗೆರೆ.
ವಿಶ್ವಾಸ್ ಲೈಫ್‌ಕೇರ್ , ಹದಡಿ ರಸ್ತೆ, ದಾವಣಗೆರೆ.
ಕಿಯಾನ್ ಹೆಲ್ತ್‌ಕೇರ್ ಪ್ರಾಡಕ್ಟ್ಸ್, ದಾವಣಗೆರೆ.

# ಹರಿಹರ: ಬೀರೂರು-ಸಮ್ಮಸಗಿ ರಸ್ತೆ ದುರಸ್ತಿ : ಸರ್ವೇಗೆ ಅಡ್ಡಿ



ಹರಿಹರ, ನ. 29- ನಗರದ ಬೀರೂರು- ಸಮ್ಮಸಗಿ ರಸ್ತೆಯನ್ನು ದುರಸ್ತಿ ಪಡಿಸಲು, ಸಿಪಿಐ ಸುರೇಶ್ ಸರಗಿ, ಪಿಎಸ್ಐ ಚಿದಾನಂದ, ಶ್ರೀಪತಿ ಅಗ್ನಿ ಯವರ ಸಹಕಾರದೊಂದಿಗೆ ಲೋಕೋಪಯೋಗಿ ಇಲಾಖೆ ಅಧಿಕಾರ ಕೆ.ಎನ್. ಶಿವಮೂರ್ತಿ ನೇತೃತ್ವದ ತಂಡವು ಸರ್ವೇ ಮಾಡಲು ಮುಂದಾದ ವೇಳೆ, ರಸ್ತೆ ದುರಸ್ತಿ ಮಾಡುವಾಗ ದರ್ಗಾ ಗೋಡೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ರಸ್ತೆ ದುರಸ್ತಿ ಪಡಿಸಬೇಕು ಮತ್ತು ನೀಲ ನಕ್ಷೆಯನ್ನು ತೋರಿಸಿ ಎಲ್ಲರ ಸಹಮತದೊಂದಿಗೆ ಕಾಮಗಾರಿ ಮಾಡುವಂತೆ ಸ್ಥಳೀಯ ಮುಸ್ಲಿಂ ಸಮುದಾಯದ ಮುಖಂಡರು ಒತ್ತಡ ಹಾಕಿದ್ದರಿಂದ ಸರ್ವೇ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ ಘಟನೆ ನಡೆಯಿತು.

ಸ್ಥಳೀಯ ತುಂಗಭದ್ರಾ ನದಿ ಸೇತುವೆಯ ಹತ್ತಿರದ ದರ್ಗಾ ಮುಂಭಾಗದ ರಸ್ತೆಯನ್ನು, ಹಿಂದೆ ದಾವಣಗೆರೆ ಉಸ್ತುವಾರಿ ಸಚಿವರಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್, ಹರಿಹರದ ಅಂದಿನ ಶಾಸಕರಾಗಿದ್ದ ಹೆಚ್.ಎಸ್. ಶಿವಶಂಕರ್, ಜಿಲ್ಲಾಧಿಕಾರಿ ಅಂಜನ್ ಕುಮಾರ್ ನೇತೃತ್ವದಲ್ಲಿ ರಸ್ತೆಯನ್ನು ದುರಸ್ತಿ ಪಡಿಸಲು 18 ಕೋಟಿ ಹಣವನ್ನು ಬಿಡುಗಡೆ ಮಾಡಿ ಕಾಂಕ್ರೀಟ್ ರಸ್ತೆಯ ಕಾಮಗಾರಿ ಮಾಡಲಾಗಿತ್ತು.

ಆ ವೇಳೆ ಸುಮಾರು 200 ಮೀಟರ್ ರಸ್ತೆಯನ್ನು ಹಣದ ಕೊರತೆಯಿಂದಾಗಿ ಮಾಡದಿರುವ ಕಾರಣ ಬಹಳ ದಿನಗಳಿಂದ ಹದಗೆಟ್ಟು ಹೋಗಿದ್ದ ರಸ್ತೆಯಿಂದಾಗಿ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಪ್ರತಿನಿತ್ಯ ಹಲವಾರು ರೀತಿಯ ತೊಂದರೆಗಳು ಆಗುತ್ತಿರುವುದರಿಂದ ರಸ್ತೆಯನ್ನು ದುರಸ್ತಿ ಪಡಿಸುವಂತೆ ಆಗ್ರಹಿಸಿ ತಾಲ್ಲೂಕು ಜಯ ಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ್ ನೇತೃತ್ವದಲ್ಲಿ ದೀಡು ನಮಸ್ಕಾರ ಮತ್ತು ಧರಣಿ ಸತ್ಯಾಗ್ರಹ ಮಾಡುವ ಮೂಲಕ ಸರ್ಕಾರಕ್ಕೆ ಒತ್ತಡ ಹಾಕಲಾಗಿತ್ತು. ಜೊತೆಗೆ ತುಂಗಭದ್ರಾ ನದಿಯ ದಂಡೆಯ ಮೇಲೆ ರಾಘವೇಂದ್ರ ಸ್ವಾಮಿ ದೇವಸ್ಥಾನ ಹಿಂಬದಿಯಲ್ಲಿ ತುಂಗಾರತಿ ಕಾಮಗಾರಿ ಭರದಿಂದ ಸಾಗಿದ್ದು, ಅದು ಕೂಡ ಶೀಘ್ರದಲ್ಲಿ ಉದ್ಘಾಟನೆ ಆಗುವುದರಿಂದ ಪಂಚಮಸಾಲಿ ಗುರು ಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮಿಗಳು, ರಸ್ತೆ ದುರಸ್ತಿ ಪಡಿಸುವಂತೆ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ, ಸರ್ಕಾರ 2 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿ, ಆದಷ್ಟು ತ್ವರಿತವಾಗಿ ಕಾಮಗಾರಿ ಪ್ರಾರಂಭ ಮಾಡುವಂತೆ ಲೋಕೋಪಯೋಗಿ ಇಲಾಖೆಗೆ ಆದೇಶ ನೀಡಿತ್ತು.

ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸರ್ವೇ ಮಾಡುವುದಕ್ಕೆ ತಮ್ಮ ಸಿಬ್ಬಂದಿಗಳೊಂದಿಗೆ ಮುಂದಾದರು. ಆ ವೇಳೆ ನಗರಸಭೆ ಸದಸ್ಯ ಕೆ. ಜಿ.ಸಿದ್ದೇಶ್, ಆರ್.ಸಿ. ಜಾವೇದ್, ಮುಜಾಮಿಲ್ ಬಿಲ್ಲು, ಎಂ.ಎಸ್. ಬಾಬುಲಾಲ್, ದಾದಾ ಖಲಂದರ್, ಇಬ್ರಾಹಿಂ ಮುಸ್ಲಿಂ ಸಮುದಾಯದ ಅಂಜುಮಾನ್ ಇಸ್ಲಾಮಿಯ ಆಡಳಿತ ಮಂಡಳಿಯ ಅಧ್ಯಕ್ಷ ಏಜಾಜ್ ಆಹ್ಮದ್, ಸದಸ್ಯರಾದ ಆಸೀಫ್ ಜುನೇದಿ, ಫೈಯಾಜ್ ಆಹ್ಮದ್, ಹಾಜಿ ಹಾಲಿ, ಅಫ್ರೋಸ್, ದಾದಾಪೀರ್ ಭಾನುವಳ್ಳಿ, ಆಸೀಫುಲ್ಲಾ ಕೆ, ಜಯ ಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ, ಮಂಜುನಾಥ್ ರವರು ಸ್ಥಳಕ್ಕೆ ಆಗಮಿಸಿ, ಸರ್ವೇ ಮಾಡುವುದಕ್ಕೆ ನಮಗೆ ಅಭ್ಯಂತರ ಇಲ್ಲ, ಆದರೆ ಇದಕ್ಕೆ ಎಷ್ಟು ಹಣ ಬಿಡುಗಡೆ ಆಗಿದೆ, ನೀಲ ನಕ್ಷೆಯನ್ನು ಯಾವ ರೀತಿಯಲ್ಲಿ ತಯಾರಿ ಮಾಡಿದ್ದೀರಾ, ಅದನ್ನು ತೋರಿಸಿ ಸರ್ವೇ ಮಾಡಿ ಎಂದು ಬಿಗಿಪಟ್ಟು ಹಿಡಿದಾ ಸರ್ವೇ ಮಾಡುವುದನ್ನು ಅರ್ಧಕ್ಕೆ ನಿಲ್ಲಿಸಿ, ಅವರನ್ನು ತಮ್ಮ ಕಚೇರಿಗೆ ಕರೆದುಕೊಂಡು ಹೋಗಿ ರಸ್ತೆ ಕಾಮಗಾರಿ ಮಾಡುವುದಕ್ಕೆ ಯಾವ ರೀತಿಯ ನೀಲ ನಕ್ಷೆಯನ್ನು ಮಾಡಿಕೊಳ್ಳಲಾಗಿದೆ ಎಂಬುದರ ಬಗ್ಗೆ ನಕ್ಷೆಯನ್ನು ತೋರಿಸಿದರು.

ಈ ವೇಳೆ ಮುಖಂಡರು ಮಾತನಾಡಿ, ಇನ್ನೊಮ್ಮೆ ಒಂದು ಸಭೆಯನ್ನು ಆಯೋಜಿಸಿ ಆ ಸಭೆಯಲ್ಲಿ ಜಿಲ್ಲಾಧಿಕಾರಿಗಳು, ಶಾಸಕರು, ಸ್ಥಳೀಯ ರಾಜಕೀಯ ಮುಖಂಡರು, ಪತ್ರಕರ್ತರು, ತಹಶೀಲ್ದಾರ್, ಪೌರಾಯುಕ್ತರು, ವಿವಿಧ ಸಂಘಟನೆಯ ಮುಖಂಡರು ಸೇರಿದಂತೆ, ಸಭೆಯನ್ನು ಏರ್ಪಡಿಸಿ ಎಲ್ಲರ ಸಹಮತದೊಂದಿಗೆ ಕಾಮಗಾರಿ ಆರಂಭಿಸುವಂತೆ ತಿಳಿಸಿದರು.

ಲೋಕೋಪಯೋಗಿ ಇಲಾಖೆ ಅಧಿಕಾರಿ ಶಿವಮೂರ್ತಿ ಮಾತನಾಡಿ, ಸರ್ಕಾರ 2 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ 1 ಕೋಟಿ 60 ಲಕ್ಷ ರೂಪಾಯಿ ವೆಚ್ಚದಲ್ಲಿ 200 ಮೀಟರ್ ರಸ್ತೆಯನ್ನು ಗ್ರಾವೆಲ್ ಹಾಕಿ ಟಾರ್ ಮಾಡುವುದಕ್ಕೆ ಈಗಾಗಲೇ ನೀಲ ನಕ್ಷೆಯನ್ನು ತಯಾರಿಸಲಾಗಿದೆ. ಅದರಲ್ಲಿ ತುಂಗಭದ್ರಾ ನದಿಯ ಹಳೆಯ ಸೇತುವೆಯನ್ನು ಹಾಗೇ ಬಿಟ್ಟು, ಹೊಸದಾಗಿ ನಿರ್ಮಿಸಿದ ಸೇತುವೆಯ ಮೇಲೆ ವಾಹನಗಳು ಓಡಾಡುವುದಕ್ಕೆ ಅನುಕೂಲ ಆಗುವ ನಿಟ್ಟಿನಲ್ಲಿ ಹಾಗೂ ಈ ರಸ್ತೆಯ ಪಕ್ಕದಲ್ಲಿ ಓವರ್ ಹೆಡ್ ನೀರಿನ ಟ್ಯಾಂಕ್ ಇರುವುದರಿಂದ ಅದು ಮುಂದಿನ ದಿನಗಳಲ್ಲಿ ರಸ್ತೆಯಲ್ಲಿ ಭಾರಿ ವಾಹನ ಓಡಾಡುವಾಗ ಅದುರಬಹುದು ಎಂಬ ದೃಷ್ಟಿಯಿಂದ ಅದನ್ನು ಬಿಟ್ಟು ಸ್ವಲ್ಪ ದೂರದಲ್ಲಿ 40 ಅಡಿ ರಸ್ತೆ ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದಂತೆ ಇಂದು ಸರ್ವೇ ಮಾಡುವುದಕ್ಕೆ ಮುಂದಾಗಲಾಗಿತ್ತು, ಅಷ್ಟರಲ್ಲಿ ಇಷ್ಟೆಲ್ಲ ಘಟನೆ ನಡೆದಿದ್ದು, ನಾನು ಇಂದು ನಡೆದ ಘಟನೆ ಬಗ್ಗೆ ಜಿಲ್ಲೆಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಅಂಜುಮಾನ್ ಇಸ್ಲಾಮಿಯ ಆಡಳಿತ ಮಂಡಳಿಯ ಸದಸ್ಯರು, ಜಯ ಕರ್ನಾಟಕ ಸಂಘಟನೆಯ ಮುಖಂಡರು, ಪತ್ರಕರ್ತ ಎಂ.ಚಿದಾನಂದ ಕಂಚಿಕೇರಿ, ಶೇಖರಗೌಡ ಪಾಟೀಲ್, ಪ್ರವೀಣ್, ಕುಮಾರ್, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಅಕ್ರಮ ಆಸ್ತಿ : ಡಿಕೆಶಿ ಅರ್ಜಿಗೆ ಹೈಕೋರ್ಟ್ ಅಸ್ತು

ಬೆಂಗಳೂರು, ನ. 29 ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಿ.ಬಿ.ಐ. ತನಿಖೆಗೆ ರಾಜ್ಯ ಸರ್ಕಾರ ಆದೇಶಿಸಿ ರುವುದನ್ನು ಪ್ರಶ್ನಿಸಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಾಖಲಿಸಿದ್ದ ಅರ್ಜಿಯನ್ನು ವಾಪಸ್ ಪಡೆಯಲು ಹೈಕೋರ್ಟ್ ಅನು ಮತಿ ನೀಡಿದೆ. ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಸಿ.ಬಿ.ಐ. ಪ್ರಕರಣಕ್ಕೆ ನೀಡಿರುವ ಅನುಮತಿ ಯನ್ನು ವಾಪಸ್ ಪಡೆಯಲು ನಿರ್ಧರಿಸಿತ್ತು.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಿ.ಬಿ.ಐ. ಕ್ರಮ ತೆಗೆದುಕೊಳ್ಳಲು ಅನುಮತಿ ನೀಡಲಾಗಿತ್ತು. ಈಗಿನ ಕಾಂಗ್ರೆಸ್ ಸರ್ಕಾರ ಆ ಅನುಮತಿಯನ್ನು ವಾಪಸ್ ಪಡೆದಿದೆ. ಶಿವಕುಮಾರ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ರಾಜ್ಯ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ಶಿವಕುಮಾರ್ ಮನವಿ ಅಪ್ರಸ್ತುತವಾಗಿದೆ. ಇದನ್ನು ವಾಪಸ್ ಪಡೆಯಲು ಅನುಮತಿ ನೀಡಬೇಕೆಂದು ಕೋರಿದರು.

ಅರ್ಜಿ ವಾಪಸ್‌ಗೆ ಸಂಬಂಧಿಸಿದಂತೆ ತಮ್ಮ ವಾದವನ್ನೂ ಆಲಿಸಬೇಕು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನೂ ಹೈಕೋರ್ಟ್ ತಳ್ಳಿ ಹಾಕಿದೆ.

ಸಿಬಿಐ ತನಿಖೆಯನ್ನು ಪ್ರಶ್ನಿಸಿ ಶಿವಕುಮಾರ್ ದಾಖಲಿಸಿದ್ದ ಅರ್ಜಿಯನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ತಳ್ಳಿ ಹಾಕಿತ್ತು. ಇದನ್ನು ಪ್ರಶ್ನಿಸಿ ಶಿವಕುಮಾರ್ ಮೇಲ್ಮನವಿ ಸಲ್ಲಿಸಿದ್ದರು.

## ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನ : ಇಂದು ಹಂದರ ಪೂಜೆ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನ ನಗರದಲ್ಲಿ ನಡೆಯಲಿದ್ದು, ಈ ಕಾರ್ಯಕ್ರಮದ ಸಿದ್ಧತೆಯ ಹಿನ್ನೆಲೆಯಲ್ಲಿ ಪೆಂಡಾಲ್ (ಹಂದರ) ಪೂಜೆಯನ್ನು ಎಂ.ಬಿ.ಎ. ಕಾಲೇಜು ಆವರಣದಲ್ಲಿ ಇಂದು ಮಧ್ಯಾಹ್ನ 1.35 ಕ್ಕೆ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನೆರವೇರಿಸಲಿದ್ದಾರೆ ಎಂದು ಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ತಿಳಿಸಿದ್ದಾರೆ.

## ಹರಿಹರ : ಇಂದು ರಾಜ್ಯೋತ್ಸವ

ಹರಿಹರ, ನ. 29- ನಗರದ ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ನಾಳೆ ದಿನಾಂಕ 30ರ ಗುರುವಾರ ಕನ್ನಡ ರಾಜ್ಯೋತ್ಸವ ಮತ್ತು ನಾಡು, ನುಡಿಗಾಗಿ ಸೇವೆ ಸಲ್ಲಿಸಿರುವ ಮಹನೀಯರಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ನಗರ ಘಟಕದ ಅಧ್ಯಕ್ಷ ಪ್ರೀತಂ ಬಾಬು ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಅಂದು ಬೆಳಿಗ್ಗೆ 8-30 ಕ್ಕೆ ಜೆ.ಸಿ.ಬಡಾವಣೆ ಒಂದನೇ ಮೇನ್, ನಾಲ್ಕನೇ ಕ್ರಾಸ್‌ನಲ್ಲಿ ನಗರಸಭೆ ಮಾಜಿ ಅಧ್ಯಕ್ಷೆ ನಿಂಬಕ್ಕ ಚಂದಾಪೂರ್ ಅವರಿಂದ ಧ್ವಜಾರೋಹಣ ನಡೆಯಲಿದೆ. ಸಂಜೆ 4-30 ಕ್ಕೆ ಕಸಬಾ ಊರಮ್ಮ ದೇವಿಯ ದೇವಸ್ಥಾನ ಹತ್ತಿರ ವೇದಿಕೆಯ ಕಾರ್ಯಕ್ರಮವನ್ನು ಶಾಸಕ ಬಿ.ಪಿ. ಹರೀಶ್ ಉದ್ಘಾಟಿಸುವರು. ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ, ಪ್ರಾಸ್ತಾವಿಕ ನುಡಿಯನ್ನಾಡುವರು. ಜಿಲ್ಲಾ ಅಧ್ಯಕ್ಷ ಜಮ್ನಳ್ಳಿ ನಾಗರಾಜ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಎಸ್. ರಾಮಪ್ಪ, ಹೆಚ್.ಎಸ್. ಶಿವಶಂಕರ್, ಇನ್‌ಸೈಟ್ ಸಂಸ್ಥೆ ಬಿ.ಜಿ. ವಿನಯ ಕುಮಾರ್, ತಪೋವನ ಛೇರ್ಮನ್ ಶಶಿಕುಮಾರ್ ಮಹೇರ್ವಾಡೆ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಇತರೆ ಗಣ್ಯಮಾನ್ಯರು ಆಗಮಿಸುವರು. ಫ್ರೆಂಡ್ಸ್ ಮೆಲೋಡಿಯಸ್ ದಾವಣಗೆರೆ ಇವರಿಂದ ಆರ್ಕೆಸ್ಟ್ರಾ ಕಾರ್ಯಕ್ರಮ ನಡೆಯಲಿದೆ.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷ ರಮೇಶ್ ಮಾನೆ, ಗೌರವಾಧ್ಯಕ್ಷ ಸಿದ್ದಪ್ಪ, ಶಂಕರ್ ದುರುಗೋಜಿ, ರಮೇಶ್ ರಾಜು, ಚಂದ್ರಪ್ಪ ಇತರರು ಹಾಜರಿದ್ದರು

## ನ್ಯುಮೋನಿಯಾ : ಎಚ್ಚರ ವಹಿಸಬೇಕು

**(1ನೇ ಪುಟದಿಂದ)** ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಕಣ್ಗಾವಲು ಇಡಬೇಕು ಎಂದು ಸೂಚಿಸಿದ್ದೇವೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಇನ್ನು ಮುಂದೆ ರಾಜ್ಯದ ಆಸ್ಪತ್ರೆಗಳಲ್ಲಿ ನಿಯಮಿತವಾಗಿ ಸ್ಕ್ಯಾನಿಂಗ್ ಯಂತ್ರಗಳನ್ನು ಪರಿಶೀಲಿಸಬೇಕು. ಗರ್ಭಪಾತದಂತಹ ಪ್ರಕರಣಗಳ ಮೇಲೆ ಕಣ್ಣಿಡಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಪ್ರತಿ ತಿಂಗಳು ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ನಡೆಸಬೇಕು, ಮೂರು ತಿಂಗಳಿಗೊಮ್ಮೆ ಆರೋಗ್ಯ ಇಲಾಖೆಯ ಆಯುಕ್ತರು ಸಭೆ ನಡೆಸಿ ಇದರ ಮೇಲೆ ಕಣ್ಣಿಡಬೇಕು ಎಂದ ಅವರು, ಆರು ತಿಂಗಳಿಗೊಮ್ಮೆ ತಾವೇ ಖುದ್ದಾಗಿ ಸಭೆ ನಡೆಸಿ ಪರಿಶೀಲನೆ ನಡೆಸುವುದಾಗಿ ವಿವರಿಸಿದರು.

ಈಗ ಪತ್ತೆಯಾದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಬಗ್ಗೆ ಆಮೂಲಾಗ್ರ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಇಂತಹ ಭ್ರೂಣಹತ್ಯೆಯ ಪ್ರಕರಣಗಳು ಮಂಡ್ಯ, ಮೈಸೂರು ಮಾತ್ರವಲ್ಲದೆ ರಾಜ್ಯದ ಎಲ್ಲ ಭಾಗಗಳಲ್ಲಿ ನಡೆದಿರುವ ಸಾಧ್ಯತೆ ಇದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈ ಹಿನ್ನೆಲೆಯಲ್ಲಿ ಇಡೀ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಿದ್ದು ಇದು ಪುನರಾವರ್ತನೆಯಾಗದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಲಿಂಗಾನುಪಾತ ಗಮನಿಸಿದರೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಈಗ ಪತ್ತೆಯಾಗಿರುವ ಪ್ರಕರಣವನ್ನು ಗಮನಿಸಿದರೆ ಭ್ರೂಣ ಹತ್ಯೆಯೇ ಲಿಂಗಾನುಪಾತದಲ್ಲಿ ಅಸಮಾನತೆ ಕಾಣಲು ಮುಖ್ಯ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

## ಸಿಲಿಂಡರ್ ಸ್ಫೋಟ : ವೃದ್ಧೆ ಸಾವು

ದಾವಣಗೆರೆ, ನ. 29- ಕಳೆದ ನ.23ರಂದು ಸ್ಥಳೀಯ ವಿನೋಬನಗರದ 17ನೇ ಕ್ರಾಸ್‌ನ ಮನೆಯೊಂದರಲ್ಲಿ ಸಿಲಿಂಡರ್ ಸೋರಿಕೆಯಾಗಿ ಬೆಂಕಿ ಹತ್ತಿದ ಪರಿಣಾಮ ಗಾಯಗೊಂಡಿದ್ದ ವೃದ್ಧೆ ಸೋಮವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

## ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ರಕ್ಷಾ ಸಮಿತಿ ಸಭೆ



ಮಲೇಬೆನ್ನೂರು, ನ. 29- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬುಧವಾರ ಶಾಸಕ ಬಿ.ಪಿ.ಹರೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಕಳಪೆ ಶವಾಗಾರ ಕಟ್ಟಡ, ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಸೇರಿದಂತೆ ಹಲವಾರು ಸಮಸ್ಯೆಗಳು ಅನಾವರಣಗೊಂಡವು.

18 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶವಾಗಾರ ಕಾಮಗಾರಿ ಕಳಪೆಯಾಗಿದ್ದು, ಆರ್‌ಸಿಸಿ ಛಾವಣಿ ಸೋರುತ್ತಿದೆ. ಇದಕ್ಕೆ ಯಾರು ಕಾರಣ ? ಎಂದು ಪುರಸಭೆ ಮಾಜಿ ಸದಸ್ಯ ಭಾನುವಳ್ಳಿ ಸುರೇಶ್ ಅವರು ಸಭೆಯ ಆರಂಭದಲ್ಲೇ ಗಮನಸೆಳೆದರು.

ಸಭೆಯಲ್ಲಿ ಹಾಜರಿದ್ದ ಪುರಸಭೆ ಎಂಜಿನಿಯರ್ ಅವರು ಕಟ್ಟಡ ಸೋರಿಕೆ ಪರಿಶೀಲಿಸಿ, ದುರಸ್ಥಿ ಮಾಡಿಸುವುದಾಗಿ ತಿಳಿಸಿದಾಗ, ಇಂಜಿನಿಯರುಗಳು ಸರಿಯಾಗಿ ಕೆಲಸ ಮಾಡಿಸಿಲ್ಲ. ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಿ ಎಂದು ಸಭೆಯಲ್ಲಿದ್ದವರು ಪಟ್ಟುಹಿಡಿದರು.

ಪುರಸಭೆ ಅಧಿಕಾರಿ ಸೂಕ್ತ ಉತ್ತರ ನೀಡಲು ತಡಬಡಿಸಿದಾಗ ಬಲವಂತವಾಗಿ ಹಿರಿಯ ಅಧಿಕಾರಿಗಳಿಂದ ಒತ್ತಡ ಹಾಕಿಸಿ ಕಟ್ಟಡ ಮುಕ್ತಾಯದ ಪ್ರಮಾಣ ಪತ್ರ ಪಡೆದಿದ್ದಾರೆ ಎಂದು ಪ್ರತ್ಯಾರೋಪ ಮಾಡಿದ ಘಟನೆಯೂ ನಡೆಯಿತು.

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಕ್ಕಳ ವೈದ್ಯರ ಮತ್ತು ಸರ್ಜನ್ ವೈದ್ಯರ ಕೊರತೆ ಇದೆ. ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ರಾತ್ರಿ ವೇಳೆ ವೈದ್ಯರು ಇರುವುದಿಲ್ಲ ಎಂದು ಜಿಗಳಿ ಹನುಮಗೌಡ ಸೇರಿದಂತೆ ಅನೇಕರು ದೂರಿದರು. ಲ್ಯಾಬೊರೇಟರಿ ವ್ಯವಸ್ಥೆ ಇಲ್ಲ ಎಂದು ಕಡಾರನಾಯ್ಕನಹಳ್ಳಿ ತಿಪ್ಪೇಸ್ವಾಮಿ ಹೇಳಿದರು.

ಸಿಬ್ಬಂದಿ ಕೊರತೆ ಕುರಿತು ಕರ್ತವ್ಯ ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ ಅವರು ಸಭೆಗೆ ಮಾಹಿತಿ ನೀಡಿದರು.

ನಾನು ಈ ಹಿಂದೆ ಆಸ್ಪತ್ರೆಗೆ ಬಂದಾಗ ದಂತ ವೈದ್ಯ ಡಾ. ನಿಸ್ಸಾರ್ ಅಹಮದ್ ಇರಲಿಲ್ಲ ಎಂದು ಸ್ವತಃ ಶಾಸಕ ಹರೀಶ್ ಅವರೇ ವೈದ್ಯರ ಗಮನ ಸೆಳೆದರು.

ದಂತ ವೈದ್ಯ ಡಾ. ನಿಸ್ಸಾರ್ ಅವರನ್ನು ಮಸೀದಿ ಕೆಲಸಕ್ಕೆ ನಿಯೋಜಿಸಿರುವುದಕ್ಕೆ ಎಂ.ಬಿ.ಶೌಕತ್ ಅಲಿ ಮತ್ತಿತರರು ಆಕ್ಷೇಪ ವ್ಯಕ್ತಪಡಿಸಿದರು.

ಈ ವೇಳೆ ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಇಲ್ಲಿ ಕೊರತೆ ಇರುವ ವೈದ್ಯರು ಹಾಗೂ ಸಿಬ್ಬಂದಿ ನೇಮಕ ಮಾಡುವ ಬಗ್ಗೆ ಆರೋಗ್ಯ ಸಚಿವರನ್ನು ಭೇಟಿ ಮಾಡಿ ಮನವಿ ಮಾಡುತ್ತೇನೆ ಎಂದರು. ಕಳೆದ ಶಾಸಕರ ಅವಧಿಯಲ್ಲಿ ಏನು ಅಭಿವೃದ್ಧಿ ಕೆಲಸ ಮಾಡಿದ್ದೀರಿ, ದಾಖಲೆ ನೀಡಿ ಎಂದು ಹರೀಶ್ ಅವರು ಸಭಾ ನಡಾವಳಿ ಪುಸ್ತಕ ಪರಿಶೀಲನೆ ನಡೆಸಿದರು.

ಸಭೆಯ ನಡಾವಳಿಯನ್ನು ಸರಿಯಾಗಿ ದಾಖಲಾತಿ ಇಟ್ಟಿಲ್ಲ. 6 ತಿಂಗಳಿಂದ ದಾಖಲೆ ಸರಿಯಾಗಿ ನಿರ್ವಹಿಸಿಲ್ಲ ಎಂದು ಆಸ್ಪತ್ರೆ ಹಾಗೂ ಕಚೇರಿ ಸಿಬ್ಬಂದಿಗೂ ಬಿಸಿಮುಟ್ಟಿಸಿದರು. ಎಲ್ಲಾ ಸಮರ್ಪಕ ದಾಖಲೆ ಇಟ್ಟುಕೊಂಡು ಇನ್ನೊಮ್ಮೆ ಸಭೆ ಕರೆಯುವಂತೆ ಸೂಚಿಸಿ ಶಾಸಕ ಹರೀಶ್ ಅವರು ಸಭೆಯನ್ನು ಮುಕ್ತಾಯ ಮಾಡಿದರು.

ಉಪತಹಶೀಲ್ದಾರ್ ಆರ್.ರವಿ, ಪ್ರಭಾರಿ ಟಿಎಚ್‌ಓ ಡಾ. ಪ್ರಶಾಂತ್, ತಾ.ಪಂ ಕಚೇರಿಯ ಲಿಂಗರಾಜ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್.ರಾಜು, ಎ.ಕೆ.ಲೋಕೇಶ್, ಭೋವಿ ಮಂಜಣ್ಣ, ಆಶಿಕ್ ಅಲಿ, ಮೊಹಮದ್ ಫಾಜಿಲ್ ಮತ್ತಿತರರು ಸಭೆಯಲ್ಲಿದ್ದರು.

## ಬೆಳ್ಳೂಡಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ನೆರವು



ಮಲೇಬೆನ್ನೂರು, ನ. 29- ಬೆಳ್ಳೂಡಿ ಗ್ರಾಮದ ಶ್ರೀ ಉಡಸಲಾಂಬಿಕೆ ದೇವಿಯ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದ 2 ಲಕ್ಷ ರೂ.ಗಳ ಡಿಡಿಯನ್ನು ಸಂಸ್ಥೆಯ ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿಯವರು ದೇವಸ್ಥಾನದ ಕಮಿಟಿಯವರಿಗೆ ನೀಡಿದರು.

ದೇವಸ್ಥಾನ ಕಮಿಟಿ ಅಧ್ಯಕ್ಷ ಬಿ.ಎಂ. ಮರಳಸಿದ್ದಯ್ಯ, ಜಿ.ಹನುಮಂತ ಗೌಡ್ರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಉಮೇಶ್ ಅವರು ವೀರೇಂದ್ರ ಹೆಗ್ಗಡೆಯವರಿಗೆ ಕೃತಜ್ಞತೆ ಸಲ್ಲಿಸಿದರು.

ದೇವಸ್ಥಾನದ ಕಾರ್ಯದರ್ಶಿ ಜಿ.ಎಸ್ ಸುದೀಪ್ ಗೌಡ್ರು, ಬಾತಿ ಮಹೇಶ್ವರಪ್ಪ, ವೀರೇಶ್ ಪೂಜಾರ್, ಗ್ರಾ.ಪಂ ಪಿಡಿಓ ಶಿವಪ್ಪ ಬಿರಾದಾರ್, ಯೋಜನೆಯ ವಲಯ ಮೇಲ್ವಿಚಾರಕರಾದ ಗಂಗಮ್ಮ ಹಾಗೂ ಇತರರು ಈ ವೇಳೆ ಹಾಜರಿದ್ದರು.

## ಡೀಪ್‌ಫೇಕ್ ಜೊತೆ ಮೂಲ ವಿಡಿಯೋ ತೋರಿಸಬೇಕು : ಯೂಟ್ಯೂಬ್ ನಿರ್ಬಂಧ

ನವದೆಹಲಿ, ನ. 29 – ಡೀಪ್‌ಫೇಕ್ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಗೂಗಲ್, ತನ್ನ ಯೂಟ್ಯೂಬ್‌ನಲ್ಲಿ ಬದಲಿಸಿದ ವಿಡಿಯೋ ಪ್ರಕಟಿಸುವವರು ಮೂಲ ವಿಡಿಯೋ ಸಹ ಪ್ರದರ್ಶಿಸಬೇಕು ಎಂದು ನಿರ್ಬಂಧಿಸಿದೆ.

ಯೂಟ್ಯೂಬ್‌ನಲ್ಲಿ ತಿರುಚಿದ ವಿಡಿಯೋಗಳನ್ನು ತೆಗೆದು ಹಾಕಲು ಕ್ರಮ ತೆಗೆದುಕೊಳ್ಳಲಾಗುವುದು. ಮುಖ ಇಲ್ಲವೇ ಧ್ವನಿ ಬದಲಿಸಿರುವುದರ ವಿರುದ್ಧ ಬರುವ ದೂರುಗಳನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಗೂಗಲ್ ಹೇಳಿದೆ.

ಸಾಮಾಜಿಕ ಜಾಲತಾಣಗಳು ಡೀಪ್‌ಫೇಕ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರ ಇತ್ತೀಚೆಗೆ ಸೂಚನೆ ನೀಡಿತ್ತು. ಅದರ ಬೆನ್ನಲ್ಲೇ ಗೂಗಲ್ ಕ್ರಮಕ್ಕೆ ಮುಂದಾಗಿದೆ.

## ಮಹಿಳೆಯ ಬಂಗಾರದ ಸರ ಕಿತ್ತು ಪರಾರಿ

ದಾವಣಗೆರೆ, ನ. 29- ತೋಟದಲ್ಲಿ ಬಾಳೆ ಎಲೆ ಕೊಡಲು ಹೋದಾಗ ಯುವಕರಿಬ್ಬರು ಮಹಿಳೆಯ 20 ಗ್ರಾಂ. ತೂಕದ ಬಂಗಾರದ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಹೊಸ ಬೆಳವನೂರು ಗ್ರಾಮದಲ್ಲಿ ನಡೆದಿದೆ. ವೆಂಕಟರಮಣಮ್ಮ ತಮ್ಮ ಮನೆಯ ಮುಂದಿನ ತೋಟದಲ್ಲಿದ್ದ ಬಾಳೆ ಎಲೆಗಳನ್ನು ಅಕ್ಕಪಕ್ಕದ ಹೊಲಗಳಲ್ಲಿ ಕೆಲಸ ಮಾಡುವವರು ತೆಗೆದುಕೊಂಡು ಹೋಗುತ್ತಿದ್ದರು. ಅಂತೆಯೇ ಮಂಗಳವಾರ ಇಬ್ಬರು ಯುವಕರು ತಮಗೆ ಬಾಳೆ ಎಲೆ ಬೇಕೆಂದು ಕೇಳಿದಾಗ, ವೆಂಕಟರಮಣಮ್ಮ ಕೊಡಲು ತೋಟಕ್ಕೆ ಹೋಗಿದ್ದಾರೆ. ಈ ವೇಳೆ ಯುವಕರು ಕೊರಳಲ್ಲಿದ್ದ ಬಂಗಾರದ ಸರ ಕಿತ್ತು ಪರಾರಿಯಾಗಿದ್ದಾರೆ. ಈ ಕುರಿತು ಮಹಿಳೆ ಹದಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

## ಹರಿಹರ : ನ್ಯಾ. ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹ



ಹರಿಹರ, ನ. 29 - ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಪರಿಷ್ಕೃತ ಆದೇಶದೊಂದಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಗ್ರಹಿಸಿ, ಸ್ಥಳೀಯ ಮಾದಿಗ ಸಮಾಜದಿಂದ ಮಂಗಳವಾರ ನಗರದ ತಾಲ್ಲೂಕು ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಈ ಸಂದರ್ಭದಲ್ಲಿ ಸಮುದಾಯದ ಮುಖಂಡರು ಮಾತನಾಡಿ, ಈ ಹಿಂದೆ ಕೇಂದ್ರಕ್ಕೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದ್ದ ಒಳ ಮೀಸಲಾತಿಯ ವರದಿಯಲ್ಲಿ ಕೆಲವು ನ್ಯೂನತೆ ಕಂಡು ಬಂದಿವೆ. ಆ ನ್ಯೂನತೆಗಳನ್ನು ಸರಿಪಡಿಸಿ, ಶೀಘ್ರವೇ ಪರಿಷ್ಕೃತ ವರದಿಯನ್ನು ಚಳಿಗಾಲದ ಅಧಿವೇಶನದಲ್ಲಿ ಮಂಡಿಸಿ, ಕೇಂದ್ರಕ್ಕೆ ಸಲ್ಲಿಸಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ನಂತರ ಸ್ಥಳಕ್ಕೆ ಆಗಮಿಸಿದ ಶಾಸಕ ಬಿ.ಪಿ.ಹರೀಶ್ ಹಾಗೂ ತಹಶೀಲ್ದಾರ್ ಬಸವರಾಜ್, ಮಾಜಿ ಶಾಸಕ ಎಸ್. ರಾಮಪ್ಪ ಇವರಿಗೆ ಮನವಿ ಸಲ್ಲಿಸಲಾಯಿತು.

ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್.ಆನಂದ ಕುಮಾರ್, ಪದಾಧಿಕಾರಿಗಳಾದ ಎಲ್.ಬಿ.ಹನುಮಂತಪ್ಪ, ಜಿ.ಹೆಚ್.ಸಿದ್ದಾರೂಢ, ಎಂ.ಎಸ್.ಶ್ರೀನಿವಾಸ್, ಹನುಮಂತಪ್ಪ ದೊಡ್ಡಮನಿ, ಹೆಚ್. ಶಿವಪ್ಪ, ಹೆಚ್. ಎಂ.ಹನುಮಂತಪ್ಪ, ಬಿ.ಡಿ.ಬಸವರಾಜಪ್ಪ, ಎ.ಪರಶುರಾಮ ಧೂಳೆಹೊಳೆ, ಎ.ಕೆ.ನಾಗೇಂದ್ರಪ್ಪ, ರಾಜನಹಳ್ಳಿ, ಪ್ರಕಾಶ್ ಎನ್.ಕೆ., ಚೌಡಪ್ಪ ಮೇಗಳಮನೆ, ಮುಖಂಡರಾದ ಹೆಚ್. ಮಲ್ಲೇಶ್, ಎಂ.ಬಿ.ಅಣ್ಣಪ್ಪ, ಪಿ.ಜೆ.ಮಹಾಂತೇಶ್, ಡಿ. ಹನುಮಂತಪ್ಪ, ಮಂಜಪ್ಪ ಭಾನುವಳ್ಳಿ, ಸುಭಾಷ್‌ಚಂದ್ರ ಭೋಸ್, ಎ.ಕೆ.ಶಿವರಾಂ, ಬೆಳ್ಳೂಡಿ ಹಾಲೇಶ್, ಮಂಜಪ್ಪ ಗುಳದಹಳ್ಳಿ, ವೈ.ಭಾಗ್ಯದೇವಿ ಹಾಗೂ ಇತರರಿದ್ದರು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 29-11-2023ರಂದು ನಿಧನರಾದ ಅಕ್ಕಿ ವರ್ತಕರಾದ

**ಶ್ರೀಶೈಲ ಗೌಡ್ರು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಹರ್ಷ ಕಮರ್ಷಿಯಲ್ಸ್ ✦ ಜೆ.ಪಿ. ಎಂಟರ್‌ಪ್ರೈಸಸ್
✦ ರೈಸ್ ಕಾರ್ನರ್ ✦ ಶ್ರೀ ಧರ್ಮಸ್ಥಳ & ಕೋ.,
✦ ಶ್ರೀ ವಿನಾಯಕ ರೈಸ್ ಮಿಲ್ ✦ ಮನು ಎಂಟರ್‌ಪ್ರೈಸಸ್
✦ ವಾಸು ಆಗ್ರೋ ಇಂಡಸ್ಟ್ರೀಸ್ ✦ ಶ್ರೀದೇವಿ ರೈಸ್ ಇಂಡಸ್ಟ್ರೀಸ್
✦ ಪವಾಡ ಬಸವೇಶ್ವರ ಟ್ರೇಡರ್ಸ್ ✦ ಜಯರಾಜ್ ಮೇಟಿ


**ಚೌಕಿಪೇಟೆ ಅಕ್ಕಿ ವರ್ತಕರ ಸಂಘ (ರಿ.) ದಾವಣಗೆರೆ.**


### ಶಿಲ್ಪಾ ರತ್ನಾಕರ್ ನಿಧನ




ದಾವಣಗೆರೆ ಕೆಟಿಜೆ ನಗರದ 10ನೇ ಕ್ರಾಸ್ ವಾಸಿ ಹಾಗೂ ಉಷಾ ಟ್ರೇಡಿಂಗ್ ಕಂಪನಿ ಮಾಲೀಕರಾದ ರತ್ನಾಕರ್ ಬಗಾರೆ ಅವರ ಧರ್ಮಪತ್ನಿ ಶ್ರೀಮತಿ ಶಿಲ್ಪಾ (42) ಅವರು ದಿನಾಂಕ 29.11.2023ರ ಬುಧವಾರ ಬೆಳಿಗ್ಗೆ 4 ಗಂಟೆಗೆ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 29.11.2023ರ ಬುಧವಾರ ಸಂಜೆ ವೈಕುಂಠಧಾಮದಲ್ಲಿ ನೆರವೇರಿತು.

### ಕುಂಬಾರ ಶಿವಕುಮಾರ್ (ಆರುಂಡಿ) ನಿಧನ




ದಾವಣಗೆರೆ ಹಗೇದಿಬ್ಬ ಸರ್ಕಲ್ ಕುಂಬಾರ ಪೇಟೆ ವಾಸಿ ಬಾಪೂಜಿ ಬಾಯ್ಸ್ ಹಾಸ್ಟೆಲ್ ನೌಕರರಾದ ಕುಂಬಾರ ಶಿವಕುಮಾರ್ (ಆರುಂಡಿ) (57) ಇವರು ದಿನಾಂಕ : 29.11.2023ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 30.11.2023ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಅಕ್ಕಿ ವರ್ತಕರಾದ ಶ್ರೀಶೈಲ ಗೌಡ್ರು ನಿಧನ



ದಾವಣಗೆರೆ ವಿನೋಬನಗರ ಒಂದನೇ ಮುಖ್ಯ ರಸ್ತೆ ವಾಸಿ ಅಕ್ಕಿ ವರ್ತಕರಾದ ಶ್ರೀಶೈಲ ಗೌಡ್ರು (69) ಇವರು ದಿನಾಂಕ 29.11.2023ರ ಬುಧವಾರ ರಾತ್ರಿ 8.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.11.2023ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


### ಸವಿನೆನಪು



**ಶ್ರೀಮತಿ ದಿ|| ಕಣ್ಣಾಳ್ ಪುಷ್ಪ**

ನಿಧನ : 30.11.2006

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ,
ಪತಿ : **ಕಣ್ಣಾಳ್ ಅಂಜಿನಪ್ಪ**
ಮಕ್ಕಳಾದ : **ಕೆ.ಎ. ರಾಷ್ಟ್ರಪತಿ**
**ಕೆ.ಎ. ಸಹನ, ಕೆ.ಎ. ಮಹಾಲಕ್ಷ್ಮಿ**
ಅತ್ತೆ : **ದುರುಗಮ್ಮ**, ಮಾವ : **ಬಸವರಾಜಪ್ಪ**
ತಂಗಿ : **ಮಂಜುಳ (ನೇತ್ರಾವತಿ)**
**ಕಣ್ಣಾಳ್ ವಂಶಸ್ಥರು ಮತ್ತು ಕುಟುಂಬ ವರ್ಗ ಹಾಗೂ ಬಂಧು-ಮಿತ್ರರು.**


## ಬಂಡವಾಳ ಹೂಡಿಕೆಗೆ ಸರಳೀಕೃತ ನೀತಿ

ಬೆಂಗಳೂರು, ನ. 29 - ನಿರುದ್ಯೋಗ ಸಮಸ್ಯೆ, ಬಂಡವಾಳ ಹೂಡಿಕೆಯ ಸರಳೀಕೃತ ನೀತಿಯನ್ನು ಜಾರಿಗೊಳಿಸುವತ್ತ ಸರ್ಕಾರ ಹೆಜ್ಜೆ ಇಟ್ಟಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರಕಟಿಸಿದ್ದಾರೆ.

ವಿಶ್ವದ ಬೃಹತ್ ಉದ್ದಿಮೆದಾರರು ಕರ್ನಾಟಕದತ್ತ ಮುಖ ಮಾಡಿದ್ದಾರೆ. ಅಂತವರಿಗೆ ಬಂಡವಾಳ ಹೂಡಿಕೆಯಲ್ಲಿ ಎದುರಾಗುವ ಕಾನೂನು ತೊಡಕುಗಳನ್ನು ನಿವಾರಿಸಿ ಒಂದೇ ಸೂರಿನಡಿ ಅನುಮೋದನೆ ಸಿಗುವಂತೆ ಮಾಡಲಾಗುವುದು ಎಂದರು. ಬೆಂಗಳೂರು ಟೆಕ್ ಸಮ್ಮಿಟ್ ಉದ್ಘಾಟಿಸಿ ಮಾತನಾಡಿದ ಅವರು, ಪ್ರಗತಿಯತ್ತ ಮುಖ ಮಾಡಲು ಪ್ರತಿ ಕ್ಷೇತ್ರಕ್ಕೆ ನಿರ್ದಿಷ್ಟ ನೀತಿಗಳನ್ನು ರೂಪಿಸುವಲ್ಲಿ ನಮ್ಮ ರಾಜ್ಯ ಸದಾ ಮುಂಚೂಣಿಯಲ್ಲಿದೆ. ಈ ನೀತಿಗಳು ರಾಜ್ಯದ ಪ್ರಗತಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದರು. ನಮ್ಮ ಸರ್ಕಾರವು ಈ ತಾಂತ್ರಿಕ ಪಥವನ್ನು ಮುಂದುವರೆಸಲು ಬದ್ಧವಾಗಿದೆ, ಮುಂದಿನ ನಾವೀನ್ಯತಾ ಅಲೆಯನ್ನು ಎದುರಿ ಸಲು ಅಗತ್ಯವಿರುವ ಮೂಲಸೌಕರ್ಯಕ್ಕೆ ಹೂಡಿಕೆ ಹಾಗೂ ಅಗತ್ಯ ನೆರವು ಒದಗಿಸಲು ಸಜ್ಜಾಗಿದೆ. ಉದ್ಯಮ ಹಾಗೂ ಶಿಕ್ಷಣ ಕ್ಷೇತ್ರದ ನಡುವೆ ಸಹಯೋಗ ಹಾಗೂ ನೀತಿಗಳನ್ನು ರೂಪಿಸಿ ರಾಜ್ಯವನ್ನು ಜಾಗತಿಕ ಟೆಕ್ ವೇದಿಕೆಯಲ್ಲಿ ಹೊಸ ಎತ್ತರಕ್ಕೇರಿಸಬೇಕಿದೆ ಎಂದು ಹೇಳಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ರೈಲ್ವೆ ಹಳಿಗಳಲ್ಲಿ ಆನೆಗಳ ಸಾವು ತಡೆಗೆ ಕೃತಕ ಬುದ್ಧಿವಂತಿಕೆ ವ್ಯವಸ್ಥೆ**
ನವದೆಹಲಿ : ರೈಲು ಹಳಿಗಳ ಮೇಲೆ ಆನೆಗಳ ಸಾವುಗಳನ್ನು ತಡೆಯಲು ಕೃತಕ ಬುದ್ಧಿವಂತಿಕೆ ಆಧರಿತ ನಿಗಾ ವ್ಯವಸ್ಥೆ ರೂಪಿಸಲು ರೈಲ್ವೆ ಮುಂದಾಗಿದೆ. ಅರಣ್ಯ ಮಾರ್ಗಗಳ ಮೂಲಕ ಹಾದುವ ಹೋಗುವ 700 ಕಿ.ಮೀ. ಮಾರ್ಗದಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಸ್ಸಾಂ, ಪಶ್ಚಿಮ ಬಂಗಾಳ, ಒಡಿಶಾ, ಕೇರಳ, ಜಾರ್ಖಂಡ್, ಛತ್ತೀಸ್‌ಘಡ ಹಾಗೂ ತಮಿಳುನಾಡಿನಲ್ಲಿ ಈ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

**ಮಣಿಪುರ ಉಗ್ರ ಸಂಘಟನೆ ಜೊತೆ ಶಾಂತಿ ಒಪ್ಪಂದ**
ನವದೆಹಲಿ : ಮಣಿಪುರದ ಅತ್ಯಂತ ಹಳೆಯ ಉಗ್ರವಾದಿ ಸಂಘಟನೆಯಾದ ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್ (ಯು.ಎನ್.ಎಲ್.ಎಫ್.) ಜೊತೆ ಕೇಂದ್ರ ಸರ್ಕಾರ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಸಂಘಟನೆಯಲ್ಲಿ ಮೀಟಿ ಸಮುದಾಯದವರೇ ಹೆಚ್ಚಾಗಿದ್ದಾರೆ. ಈ ಒಪ್ಪಂದ ಐತಿಹಾಸಿಕ ಮೈಲಿಗಲ್ಲು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ.

**ಸುರಕ್ಷತಾ ಪರಿಶೋಧನೆ ನಂತರ ಸುರಂಗ ಕಾಮಗಾರಿ ಮುಂದುವರಿಕೆ**
ಉತ್ತರಕಾಶಿ : ಉತ್ತರಾಖಂಡದ ಸಿಲ್ಕ್ಯಾರಾ ಸುರಂಗದಿಂದ ರಕ್ಷಿಸಲಾದ 41 ಕಾರ್ಮಿಕರನ್ನು ಹೆಲಿಕಾಪ್ಟರ್ ಮೂಲಕ ಎಐಐಎಂಎಸ್ - ಋಷಿಕೇಶಕ್ಕೆ ತರಲಾಗಿದೆ. ಅಲ್ಲಿ ಅವರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಲಾಗಿದೆ. ಸುರಕ್ಷತಾ ಪರಿಶೋಧನೆಯ ನಂತರ ಸುರಂಗದ ಕಾಮಗಾರಿ ಮುಂದುವರೆಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ. 4.5 ಕಿ.ಮೀ. ಉದ್ದದ ಸುರಂಗ ಮಾರ್ಗವನ್ನು ನಿರ್ಮಿಸಬೇಕಿದೆ.

**ಕೊರೊನಾ ನಂತರ ಪ್ರಯಾಣಿಕರ ರೈಲುಗಳ ಸಂಖ್ಯೆ ಇಳಿಕೆಯಾಗಿಲ್ಲ**
ನವದೆಹಲಿ : ಕೊರೊನಾ ನಂತರ ಪ್ರಯಾಣಿಕರ ರೈಲುಗಳ ಸಂಖ್ಯೆ ಇಳಿಸಲಾಗಿದೆ ಎಂಬ ವರದಿಯನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಳ್ಳಿ ಹಾಕಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯದೊಳಗೆ, ಪ್ರಯಾಣಿಕರ ಸಂಖ್ಯೆ ಕೊರೊನಾಗಿಂತ ಮುಂಚಿನ 650 – 700 ಕೋಟಿಗೆ ತಲುಪಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಗಂಡ – ಹೆಂಡತಿ ಜಗಳದಿಂದ ದಿಕ್ಕು ಬದಲಿಸಿದ ವಿಮಾನ**
ನವದೆಹಲಿ : ಗಂಡ ಹಂಡತಿ ಜಗಳದ ಕಾರಣದಿಂದಾಗಿ ಮ್ಯೂನಿಚ್‌ನಿಂದ ಬ್ಯಾಂಕಾಕ್‌ಗೆ ತೆರಳುತ್ತಿದ್ದ ಲುಫ್ತಾನ್ಸಾ ವಿಮಾನದ ದಿಕ್ಕು ಬದಲಿಸಿ ದೆಹಲಿಗೆ ತರಲಾಗಿದೆ. ದೆಹಲಿಯಲ್ಲಿ ದಂಪತಿಯನ್ನು ವಿಮಾನದಿಂದ ಇಳಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಗಂಡ ಜರ್ಮನಿಯವನಾಗಿದ್ದರೆ, ಹೆಂಡತಿ ಥೈಲ್ಯಾಂಡ್‌ನವಳು. ಗಂಡ ಬೆದರಿಸುತ್ತಿರುವುದಾಗಿ ಪತ್ನಿ ದೂರಿದಳು. ನಂತರ ಪರಿಶೀಲಿಸಿದಾಗ ಗಂಡ ಪಾನಮತ್ತನಾಗಿರುವುದು ಕಂಡು ಬಂತು ಎಂದು ಅಧಿಕಾರಿಗಳು ಹೇಳಿದ್ದಾರೆ.

**ದೆಹಲಿ ಮುಖ್ಯ ಕಾರ್ಯದರ್ಶಿ ಅವಧಿ ವಿಸ್ತರಣೆಗೆ ಸುಪ್ರೀಂ ಅಸ್ತು**
ನವದೆಹಲಿ : ದೆಹಲಿ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರ ಅವಧಿಯನ್ನು ಆರು ತಿಂಗಳ ಕಾಲ ವಿಸ್ತರಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ನಿವೃತ್ತಿಯ ನಂತರ ಕುಮಾರ್ ಅವಧಿ ವಿಸ್ತರಿಸುತ್ತಿರುವುದು ಸಂವಿಧಾನದ ಇಲ್ಲವೇ ಕಾನೂನಿನ ಉಲ್ಲಂಘನೆಯಲ್ಲ ಎಂದು ನ್ಯಾಯಾಲಯ ತಿಳಿಸಿದೆ. ಕುಮಾರ್ ಅವಧಿ ವಿಸ್ತರಿಸುವುದನ್ನು ಪ್ರಶ್ನಿಸಿ ಆಮ್ ಆದ್ಮಿ ಪಾರ್ಟಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

**ಲಂಚ ಪ್ರಕರಣ : ಸೆನ್ಸಾರ್ ಮಂಡಳಿಯ ಅಧಿಕಾರಿ ಬಂಧನ**
ನವದೆಹಲಿ : ಲಂಚ ಪ್ರಕರಣದಲ್ಲಿ ಸಿಲುಕಿದ್ದ ಬೆಂಗಳೂರಿನ ಸೆನ್ಸಾರ್ ಮಂಡಳಿಯ ಪ್ರಾಂತೀಯ ಅಧಿಕಾರಿ ಹಾಗೂ ಇನ್ನಿಬ್ಬರು ಖಾಸಗಿ ವ್ಯಕ್ತಿಗಳನ್ನು ಸಿ.ಬಿ.ಐ. ಬಂಧಿಸಿದೆ. ಚಲನಚಿತ್ರವೊಂದರ ಸಬ್‌ಟೈಟಲ್‌ನ ಸಣ್ಣ ವಿಷಯ ಬಗೆಹರಿಸಲು ಇವರು 12 ಸಾವಿರ ರೂ. ಲಂಚ ಪಡೆದಿದ್ದರು ಎಂದು ಆರೋಪಿಸಲಾಗಿದೆ. ಪ್ರಾದೇಶಿಕ ಅಧಿಕಾರಿ ಪ್ರಶಾಂತ್ ಕುಮಾರ್ ಹಾಗೂ ಪೃಥ್ವಿ ರಾಜ್ ಮತ್ತು ರವಿ ಎಂಬುವವರನ್ನು ಬಂಧಿಸಲಾಗಿದೆ.

## 3,607 ಕೋಟಿ ರೂ. ಹೂಡಿಕೆಗೆ ಅನುಮೋದನೆ

ಬೆಂಗಳೂರು, ನ. 29 - ರಾಜ್ಯದಲ್ಲಿ 3,607.19 ಕೋಟಿ ರೂ. ಬಂಡವಾಳ ಹೂಡಿಕೆಯ 62 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇದರಿಂದ 10,755 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, 50 ಕೋಟಿ ರೂ.ಗಳಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ 8 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ರಾಜ್ಯದಲ್ಲಿ 2,088.44 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಯಾಗಲಿದೆ, ಇವುಗಳಿಂದ 6,360 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ಹೇಳಿದರು.

ಇನ್ನು 15 ಕೋಟಿ ರೂ.ಗಳಿಂದ 50 ಕೋಟಿ ರೂ. ಮೊತ್ತದವರೆಗಿನ ಬಂಡವಾಳ ಹೂಡಿಕೆಯ 51 ಹೊಸ ಯೋಜನೆಗಳಿಗೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಿಂದ 941.40 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಅಂದಾಜು 4,395 ಜನರಿಗೆ ಉದ್ಯೋಗ ಲಭ್ಯವಾಗಲಿವೆ. ಹೆಚ್ಚುವರಿ ಬಂಡವಾಳ ಹೂಡಿಕೆಯ 3 ಯೋಜನೆಗಳಿಗೆ ಸಭೆಯು ಅನುಮೋದಿಸಿದ್ದು ಇದರಿಂದ 577.35 ಕೋಟಿ ಬಂಡವಾಳ ಹೂಡಿಕೆ ಆಗಲಿದೆ ಎಂದು ಹೇಳಿದರು.

## ಅಮೆರಿಕದಲ್ಲಿ ಸಿಖ್ ತೀವ್ರವಾದಿ ಹತ್ಯೆ ಸಂಚು

ನವದೆಹಲಿ,ನ. 29 – ಅಮೆರಿಕದಲ್ಲಿ ಸಿಖ್ ತೀವ್ರವಾದಿಯ ಹತ್ಯೆಗೆ ಸಂಚು ನಡೆದಿತ್ತು ಎಂಬ ಆರೋಪಗಳ ತನಿಖೆಗಾಗಿ ಭಾರತ ಉನ್ನತ ಹಂತದ ಸಮಿತಿಯನ್ನು ರಚಿಸಿದೆ. ಗುರ್‌ಪಟ್ವಂತ್ ಸಿಂಗ್ ಪನ್ನು ಹತ್ಯೆಗಾಗಿ ಸಂಚು ನಡೆಸಿದ್ದನ್ನು ತಪ್ಪಿಸಿದ್ದಾಗಿ ಅಮೆರಿಕದ ಅಧಿಕಾರಿಗಳು ಹೇಳಿದ್ದಾರೆ ಎಂದು ದಿ ಫೈನಾನ್ಷಿಯಲ್ ಟೈಮ್ಸ್ ಪತ್ರಿಕೆ ವರದಿ ಮಾಡಿತ್ತು. ಈ ಸಂಚಿನಲ್ಲಿ ಭಾರತ ಸರ್ಕಾರ ಸಹ ಭಾಗಿಯಾಗಿದೆ ಎಂದು ಆರೋಪಿಸಲಾಗಿತ್ತು.

ಈ ಬಗ್ಗೆ ತನಿಖೆ ನಡೆಸಲು ನವೆಂಬರ್ 18ರಂದು ಉನ್ನತ ಹಂತದ ಸಮಿತಿಯನ್ನು ರಚಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ. ಅಮೆರಿಕ ಹಾಗೂ ಕೆನಡಾದ ನಾಗರಿಕನಾಗಿರುವ ಪನ್ನು, ಉಗ್ರವಾದ ಆರೋಪ ಎದುರಿಸುತ್ತಿದ್ದಾನೆ.

## ನೇಪಾಳದಲ್ಲಿ ಮೊದಲ ಸಲಿಂಗ ವಿವಾಹ ನೋಂದಣಿ

ಕಠ್ಮಂಡು, ನ. 29 – ನೇಪಾಳದಲ್ಲಿ ಮೊದಲ ಸಲಿಂಗ ವಿವಾಹ ನೋಂದಣಿಯಾಗಿದೆ. ಐದು ತಿಂಗಳ ಹಿಂದಷ್ಟೇ ನೇಪಾಳದ ಸುಪ್ರೀಂ ಕೋರ್ಟ್ ಸಲಿಂಗ ಮದುವೆ ಕಾನೂನು ಬದ್ಧಗೊಳಿಸಿತ್ತು.

ತೃತೀಯ ಲಿಂಗಿ ಮಹಿಳೆ ಮಾಯಾ ಗುರುಂಗ್ ಹಾಗೂ ಸುರೇಂದ್ರ ಪಾಂಡೆ ಅವರು ಮದುವೆ ಮಾಡಿಕೊಂಡಿದ್ದಾರೆ. ಅವರ ಮದುವೆಯನ್ನು ಡೊರ್ಡಿ ಗ್ರಾಮೀಣ ಪಾಲಿಕೆಯಲ್ಲಿ ನೋಂದಣಿ ಮಾಡಲಾಗಿದೆ. ಇದು ದಕ್ಷಿಣ ಏಷಿಯಾದ ಮೊದಲ ಅಧಿಕೃತ ಸಲಿಂಗ ಮದುವೆಯಾಗಿದೆ.

# ಕನಕ ಜಯಂತ್ಯುತ್ಸವ ಉದ್ಘಾಟಿಸಿದ ಸಿದ್ದರಾಮಯ್ಯ



ಬೆಂಗಳೂರು, ನ.29- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ 536ನೇ ಶ್ರೀ ಕನಕ ಜಯಂತ್ಯೋತ್ಸವವನ್ನು ಉದ್ಘಾಟಿಸಿದರು.

ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ರೇವಣಸಿದ್ದೇಶ್ವರ, ಶ್ರೀ ಬೀರಲಿಂಗೇಶ್ವರ, ಶ್ರೀ ಮೈಲಾರಲಿಂಗೇಶ್ವರ, ಶ್ರೀ ಮಹಾಸಿದ್ದೇಶ್ವರಿ ದೇವರುಗಳ ಕುಂಭಾಭಿಷೇಕ ನೆರವೇರಿಸಿದರು.

ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಮಾನ್ ಮಹಾರಾಜ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು, ಹಜರತ್ ಬೀಜಾಪುರದ ಹಾಶಿಮ್ ಪೀರ್ ದರ್ಗಾದ ಸೈಯ್ಯದ್ ಮೊಹಮ್ಮದ್ ತನ್ವೀರ್ ಹಾಶ್ಮಿ, ಕರ್ನಾಟಕ ಧರ್ಮಪ್ರಾಂತ್ಯದ ಧರ್ಮಗುರು ಡಾ.ಫಾ.ಅಲ್ಫೋನ್ಸ್ ಫರ್ನಾಂಡೀಸ್ ಯೇಸು ಅವರು, ನಗರಾಭಿವೃದ್ಧಿ ಸಚಿವರಾದ ಭೈರತಿ ಸುರೇಶ್, ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಧಾನಸಭೆಯ ಉಪಸಭಾಪತಿಗಳಾದ ರುದ್ರಪ್ಪ ಲಮಾಣಿ, ಮಾಜಿ ಸಚಿವರಾದ ಹೆಚ್.ಎಂ.ರೇವಣ್ಣ, ಹೊಸದುರ್ಗ ಶಾಸಕರಾದ ಬಿ.ಜಿ.ಗೋವಿಂದಪ್ಪ, ಹಿರೇಕೆರೂರು ಶಾಸಕ ಯು.ಬಿ.ಬಣಕಾರ್, ರಾಣೆಬೆನ್ನೂರು ಶಾಸಕರಾದ ಪ್ರಕಾಶ್ ಕೋಳಿವಾಡ, ಹಾನಗಲ್ ಶಾಸಕರಾದ ಶ್ರೀನಿವಾಸ್ ಮಾನೆ. ಹರಿಹರ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಹಾಗು ಹಲವು ಗಣ್ಯರು ಉಪಸ್ಥಿತರಿದ್ದರು.

# ಬೆಳಗಾವಿ ಅಧಿವೇಶನದಲ್ಲಿ ಉತ್ತರಿಸಲು ಸಿದ್ಧರಿದ್ದೇವೆ : ಸಿಎಂ

ಹಾವೇರಿ, ನ. 29- ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ವಿರೋಧ ಪಕ್ಷದವರು ಕೇಳುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರ ಸಿದ್ಧವಿದೆ. ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಗುವುದು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಹಾವೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ನಿಗಮ ಮಂಡಳಿ ಅಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿ, ಅಧ್ಯಕ್ಷರ ನೇಮಕಾತಿಗೆ ಮೊದಲ ಹಂತದಲ್ಲಿ ಶಾಸಕರನ್ನು ಪರಿಗಣಿಸಲಾಗುವುದು. ನಾನು ಹಾಗೂ ಉಪಮುಖ್ಯಮಂತ್ರಿಗಳು ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ, ಪಕ್ಷದ ವರಿಷ್ಠರಿಗೆ ನೀಡಲಾಗಿದ್ದು, ಅನುಮತಿಯನ್ನು ನಿರೀಕ್ಷಿಸಲಾಗಿದೆ ಎಂದರು.

ಬರ ಪರಿಹಾರದಲ್ಲಿ ರೈತರ ಪಾಲಿನ ಮೊತ್ತದ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತಾ, ಬೆಳೆಹಾನಿ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ. ಎನ್ ಡಿ ಆರ್ ಎಫ್ ಮಾರ್ಗಸೂಚಿಯಂತೆ ನಿಗದಿಯಾಗಿರುವ ಪರಿಹಾರ ಮೊತ್ತವನ್ನು ನೀಡಲಾಗುವುದು. ಹಾವೇರಿ ಜಿಲ್ಲೆಗೆ ಕುಡಿಯುವ ನೀರು, ಮೇವು, ಉದ್ಯೋಗ ಸೇರಿದಂತೆ ವಿವಿಧ ಕಾರ್ಯಗಳಿಗೆ 226 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಇಡೀ ದೇಶದಲ್ಲಿ 12 ರಾಜ್ಯಗಳಲ್ಲಿ ಬರಗಾಲ ಪರಿಸ್ಥಿತಿಯಿದೆ. ರಾಜ್ಯಕ್ಕೆ ಬರ ಅಧ್ಯಯನಕ್ಕಾಗಿ ಬಂದ ಕೇಂದ್ರ ತಂಡ ಪರಿಶೀಲಿಸಿದೆ. ಆದರೂ ಕೇಂದ್ರದಿಂದ ಬರ ಪರಿಹಾರ ಬಿಡುಗಡೆಯಾಗಿಲ್ಲ. ರಾಜ್ಯದ ದುಡ್ಡನ್ನು ರಾಜ್ಯಕ್ಕೆ ಬಿಡುಗಡೆ ಮಾಡುತ್ತಿಲ್ಲ ಎಂದರು.

## ಹೊನ್ನಾಳಿಗೆ ಇಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿಪಕ್ಷ ನಾಯಕ ಅಶೋಕ್



ನ್ಯಾಮತಿ, ನ. 29 - ನಾಳೆ ದಿನಾಂಕ 30 ರ ಗುರುವಾರ ಬೆಳಗ್ಗೆ 9 ಘಂಟೆಗೆ ನೂತನ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ನೂತನ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ಸವಳಂಗ ಸರ್ಕಲ್ ಗೆ ಆಗಮಿಸಲಿದ್ದಾರೆಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

ಸವಳಂಗ ಗ್ರಾಮದ ಮಿಕ್ಕಿಮಾರಮ್ಮ ದೇವಸ್ಥಾನದಲ್ಲಿ ಮುಖಂಡರು, ಕಾರ್ಯಕರ್ತರ ಸಭೆ ನಡೆಸಿ ಮಾತನಾಡಿದ ರೇಣುಕಾಚಾರ್ಯ ಅವರು, ವಿಜಯೇಂದ್ರ ಮತ್ತು ಅಶೋಕ್ ಅವರುಗಳನ್ನು ಸವಳಂಗ ಸರ್ಕಲ್ ನಲ್ಲಿ ಬಿಜೆಪಿ ಹೊನ್ನಾಳಿ ಮಂಡಲದ ವತಿಯಿಂದ ಅದ್ದೂರಿಯಾಗಿ ಬರಮಾಡಿಕೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲ್ಲೂಕು ಅಧ್ಯಕ್ಷ ಜೆ.ಕೆ.ಸುರೇಶ್, ಜಿ.ಪಂ.ಮಾಜಿ ಉಪಾಧ್ಯಕ್ಷ ಸುರೇಂದ್ರನಾಯ್ಕ, ಜಿಲ್ಲಾ ಪ್ರಧಾನಕಾರ್ಯದರ್ಶಿ ಅರಕೆರೆ ನಾಗರಾಜ್, ಮಾಜಿ ನಿರ್ದೇಶಕರುಗಳಾದ ಶಿವು ಹುಡೇದ್, ಮಾರುತಿ ನಾಯ್ಕ, ಗ್ರಾ.ಪಂ.ಮಾಜಿ ಅಧ್ಯಕ್ಷರಾದ ಗಿರೀಶ್ ಪಟೇಲ್, ಗ್ರಾ.ಪಂ.ಸದಸ್ಯರಾದ ಕೊಡತಾಳ್ ನಾಗರಾಜ್, ಗ್ರಾ.ಪಂ.ಅಧ್ಯಕ್ಷರಾದ ಗೋವಿಂದ್, ಸುರಹೊನ್ನೆ ಸದಣ್ಣ, ತಾ.ಪಂ. ಮಾಜಿ ಸದಸ್ಯ ಹನುಮಂತಪ್ಪ, ಸೋಗಿಲು ಮಂಜುನಾಥ್, ಸಂತೋಷ್, ಕಾಮೇಶ್ ನಾಯ್ಕ, ಬಿದರಹಳ್ಳಿ ಯೋಗೇಶ್, ಮಾದಾಪುರ ಮಂಜು ಪಾಟೀಲ್ ಸೇರಿದಂತೆ ಮತ್ತಿತರರಿದ್ದರು.

## ಗ್ರಾಮೀಣ ಭಾಗದ ಶಾಲೆಗಳ ಗುಣಮಟ್ಟ ಸುಧಾರಣೆಗೆ ಸಿ.ಎಸ್.ಆರ್. ಮೀಸಲಿಡಬೇಕು


ಬೆಂಗಳೂರು, ನ. 29 - ಗ್ರಾಮೀಣ ಭಾಗದ ಶಾಲೆಗಳ ಗುಣಮಟ್ಟ ಸುಧಾರಣೆಗೆ ಸಿಎಸ್‌ಆರ್ ನಿಧಿಯನ್ನು ಮೀಸಲಿಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಯಮಿಗಳಿಗೆ ಇಂದಿಲ್ಲಿ ಕರೆ ನೀಡಿದ್ದಾರೆ.

ಅರಮನೆ ಆವರಣದಲ್ಲಿ ನಡೆದ ಬೆಂಗಳೂರು ಟೆಕ್ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಶಾಲೆಗಳ ಗುಣಮಟ್ಟ ಹೆಚ್ಚಿದರೆ ಆ ಭಾಗದ ಮಕ್ಕಳು ಕೂಡ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ನೆರವಾಗುತ್ತದೆ ಎಂದರು.

ಈ ಬಗ್ಗೆ ಅಜೀಂ ಪ್ರೇಮ್‌ಜೀ ಸೇರಿದಂತೆ ಹಲವರ ಜತೆ ಚರ್ಚೆ ಮಾಡಿದ್ದು, ಈಗಾಗಲೇ 2 ಸಾವಿರ ಕೋಟಿ ಹಣವನ್ನು ಈ ಉದ್ದೇಶಕ್ಕೆ ನೀಡಲು ಅವರು ಮುಂದಾಗಿದ್ದಾರೆ. ನಾವೆಲ್ಲರೂ ಒಟ್ಟಿಗೇ ಸೇರಿ ಕೆಲಸ ಮಾಡೋಣ ಎಂದರು.

ರಾಜ್ಯದಲ್ಲಿ ನೂತನ ಜೈವಿಕ ತಂತ್ರಜ್ಞಾನ ನೀತಿಯನ್ನು ರೂಪಿಸಲಾಗಿದೆ. ಆದರೂ ಉದ್ಯಮದಾರರಿಗೆ ರಾಜ್ಯ ಸರ್ಕಾರ ಯಾವ ಸವಲತ್ತು ಹಾಗೂ ಪ್ರೋತ್ಸಾಹ ಸಿಗುತ್ತದೆ ಎಂಬುದು ಮುಖ್ಯವಾಗುತ್ತದೆ. ಉದ್ಯಮಿಗಳು, ಬಂಡವಾಳ ಹೂಡಿಕೆದಾರರು ಬಲಿಷ್ಠವಾದರೆ, ಸರ್ಕಾರ ಬಲಿಷ್ಠವಾಗುತ್ತದೆ. ನೀವು ದುರ್ಬಲರಾದರೆ ನಾವು ದುರ್ಬಲವಾಗುತ್ತೇವೆ. ನೀವು ಆರ್ಥಿಕವಾಗಿ ಸದೃಢವಾದರೆ ರಾಜ್ಯ ಕೂಡ ಆರ್ಥಿಕವಾಗಿ ಸದೃಢವಾಗುತ್ತದೆ ಎಂದು ನಾವು ನಂಬಿದ್ದೇವೆ ಎಂದೂ ಅವರು ತಿಳಿಸಿದರು.

## ನಗರಕ್ಕೆ ಇಂದು ನಟ ಅಭಿಷೇಕ್ ಅಂಬರೀಶ್



ಈಚೆಗೆ ಬಿಡುಗಡೆಯಾದ ಸೂರಿ ನಿರ್ದೇಶನದ 'ಬ್ಯಾಡ್ ಮ್ಯಾನರ್ಸ್' ಚಿತ್ರದ ಪ್ರಚಾರಕ್ಕಾಗಿ ಕನ್ನಡ ಚಲನಚಿತ್ರ ನಟ ಅಭಿಷೇಕ್ ಅಂಬರೀಶ್ ಅವರು ನಗರದ ಅಶೋಕ ಚಿತ್ರಮಂದಿರಕ್ಕೆ ಇಂದು ಸಂಜೆ 6 ಗಂಟೆಗೆ ಆಗಮಿಸಲಿದ್ದಾರೆ. ಚಿತ್ರದ ನಾಯಕಿ ರಚಿತಾರಾಮ್, ನಿರ್ದೇಶಕ ಸೂರಿ ಮತ್ತು ತಂಡ ನಗರಕ್ಕೆ ಆಗಮಿಸಲಿದ್ದು, ಚಿತ್ರ ಕಲಾಭಿಮಾನಿಗಳು ಆಗಮಿಸಲು ಚಿತ್ರ ವಿತರಕ ಪಿ.ಹೆಚ್. ಮಂಜುನಾಥ್ ಕೋರಿದ್ದಾರೆ.

## ಲಾಡ್ಜ್‌ನಲ್ಲಿ ಕಳ್ಳತನ

ದಾವಣಗೆರೆ, ನ. 29- ನಗರದ ನ್ಯೂ ನಂದಿ ಲಾಡ್ಜ್‌ನ ಕ್ಯಾಷ್ ಕೌಂಟರ್ ಡ್ರಾನಲ್ಲಿದ್ದ 29 ಸಾವಿರ ರೂ.ಗಳನ್ನು 15 ವರ್ಷದ ಬಾಲಕನೋರ್ವ ಕದ್ದು ಪರಾರಿಯಾಗಿರುವ ಘಟನೆ ಶನಿವಾರ ನಡೆದಿದೆ. ಮ್ಯಾನೇಜರ್ ಕರಿಬಸಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಶಿಶುಪಾಲನಾ ಕೇಂದ್ರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ದಾವಣಗೆರೆ, ನ. 29 - ಸುವರ್ಣ ಕರ್ನಾಟಕ ವೇದಿಕೆಯಿಂದ ನಗರದ ಶ್ರೀ ರಾಜೇಶ್ವರಿ ಬಡಾವಣೆಯಲ್ಲಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಶಿಶುಪಾಲನಾ ಕೇಂದ್ರದಲ್ಲಿರುವ ಮಕ್ಕಳೊಂದಿಗೆ 68 ನೇ ಕನ್ನಡ ರಾಜ್ಯೋತ್ಸವವನ್ನು ತಾಯಿ ಭುವನೇಶ್ವರಿಯ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ, ನಾಡಗೀತೆ ಹಾಡಿ, ಮಕ್ಕಳಿಗೆ ಸಿಹಿ ಹಂಚುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್ ಆರ್, ಶಾಲಾ ಸಿಬ್ಬಂದಿಗಳಾದ ರಾಜೇಶ್ವರಿ ಸ.ಶಿ., ಅನುಷಾ ಸ.ಶಿ., ಮಧುಬಾಯಿ ಸ.ಶಿ., ಹಾಗೂ ದಿವ್ಯ, ಸ.ಶಿ., ಮತ್ತು ಇತರರು ಭಾಗವಹಿಸಿದ್ದರು.

## ಚಳಿಗಾಲದ ಅಧಿವೇಶನದಲ್ಲಿ 18 ಮಸೂದೆಗಳ ಮಂಡನೆ

ನವದೆಹಲಿ, ನ. 29 – ಮುಂಬರುವ ಚಳಿಗಾಲದ ಅಧಿವೇಶನದಲ್ಲಿ 18 ಮಸೂದೆಗಳನ್ನು ಮಂಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರಲ್ಲಿ ಅಪರಾಧಿಕ ಕಾಯ್ದೆಗಳನ್ನು ಬದಲಿಸುವ ಮೂರು ಮಸೂದೆಗಳೂ ಸೇರಿವೆ.

ಜಮ್ಮು ಮತ್ತು ಕಾಶ್ಮೀರ ಹಾಗೂ ಪುದುಚೆರಿಗಳಿಗೂ ಮಹಿಳಾ ಮೀಸಲಾತಿ ಕಾಯ್ದೆ ವಿಸ್ತರಿಸಲು ಮಸೂದೆಗಳನ್ನು ಮಂಡಿಸಲಾಗುವುದು.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಸಂಖ್ಯಾ ಬಲವನ್ನು 107ರಿಂದ 114ಕ್ಕೆ ಹೆಚ್ಚಿಸಲಾಗುವುದು.

ಡಿಸೆಂಬರ್ 4ರಿಂದ ಚಳಿಗಾಲದ ಅಧಿವೇಶನ ಆರಂಭವಾಗಲಿದೆ.

# ಅರಿವುಳ್ಳವರು ಬ್ರೆಕ್ಸಿಟ್ ಬಯಸಿರಲಿಲ್ಲ

## ಯುರೋಪ್ ಒಕ್ಕೂಟದಿಂದ ಹೊರ ಬರಬೇಕು ಎಂದವರಿಗೀಗ ಪಶ್ಚಾತ್ತಾಪ



ನವದೆಹಲಿ, ನ. 29 – ಯುರೋಪ್ ಒಕ್ಕೂಟದಿಂದ ಬ್ರಿಟನ್ ನಿರ್ಗಮಿಸಿ ವರ್ಷಗಳೇ ಆಗಿವೆ. ಆದರೆ, ಯುರೋಪ್ ಒಕ್ಕೂಟದಿಂದ ಬ್ರಿಟನ್ ನಿರ್ಗಮಿಸಬಾರದು ಎಂದು ಹೆಚ್ಚಿನ ಅರಿವುಳ್ಳವರು ಅಭಿಪ್ರಾಯ ಪಟ್ಟಿದ್ದರು ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿರುವುದು ಆಸಕ್ತಿಕರವಾಗಿದೆ.

ಯುರೋಪ್ ಒಕ್ಕೂಟದಿಂದ ಬ್ರಿಟನ್ ನಿರ್ಗಮಿಸಬೇಕೇ? ಎಂಬ ಬಗ್ಗೆ 2016ರಲ್ಲಿ ಜನಮತಗಣನೆ ನಡೆಸಲಾಗಿತ್ತು. ಶೇ.51.9 ರಷ್ಟು ಜನರು ಒಕ್ಕೂಟದಿಂದ ಹೊರ ಬರುವುದರ ಪರ ಮತ ಚಲಾಯಿಸಿದ್ದರು. 2020ರಲ್ಲಿ ಬ್ರಿಟನ್ ಔಪಚಾರಿಕವಾಗಿ ಒಕ್ಕೂಟದಿಂದ ಹೊರ ಬಂದಿತ್ತು. ಇಡೀ ಪ್ರಕ್ರಿಯೆಯನ್ನು ಬ್ರೆಕ್ಸಿಟ್ ಎಂದು ಬಣ್ಣಿಸಲಾಗಿತ್ತು.

ಬ್ರೆಕ್ಸಿಟ್ ಜನಮತಗಣನೆಯಲ್ಲಿ ಜನರು ಯಾವ ರೀತಿ ಮತ ಚಲಾಯಿಸಿದ್ದರು ಎಂಬ ಬಗ್ಗೆ ಬ್ರಿಟನ್‌ನ ಬಾತ್ ವಿಶ್ವವಿದ್ಯಾಲಯದ ಸಂಶೋಧಕರು ಅಧ್ಯಯನ ನಡೆಸಿದ್ದಾರೆ. ಅಧ್ಯಯನದ ಪ್ರಕಾರ, ಹೆಚ್ಚಿನ ಅರಿವಿನ ಸಾಮರ್ಥ್ಯ ಉಳ್ಳವರು ಬ್ರಿಟನ್ ಯುರೋಪ್ ಒಕ್ಕೂಟದಲ್ಲೇ ಮುಂದುವರೆಯಬೇಕು ಎಂದು ಬಯಸಿದ್ದರು.

ನೆನಪಿನ ಶಕ್ತಿ, ವಾಕ್ಚಾತುರ್ಯ ಹಾಗೂ ತಾರ್ಕಿಕ ಸಾಮರ್ಥ್ಯಗಳು ಜನರು ನಿರ್ಧಾರ ತೆಗೆದುಕೊಳ್ಳುವುದರ ಮೇಲೆ ಪರಿಣಾಮ ಬೀರಿವೆ. ಈ ಸಾಮರ್ಥ್ಯಗಳು ಇದ್ದವರ ಪೈಕಿ ಹೆಚ್ಚಿನ ಜನ ಯುರೋಪ್ ಒಕ್ಕೂಟದಲ್ಲೇ ಮುಂದುವರೆಯಲು ಬಯಸಿದ್ದರು ಎಂದು ಅಧ್ಯಯನ ತಿಳಿಸಿದೆ.

ಬ್ರೆಕ್ಸಿಟ್ ಸಮಯದಲ್ಲಿ ಸಾಕಷ್ಟು ಅಪಪ್ರಚಾರದ ಮಾಹಿತಿ ಹರಡಲಾಗಿತ್ತು. ಕಡಿಮೆ ಅರಿವಿನ ಸಾಮರ್ಥ್ಯದವರು ಬ್ರೆಕ್ಸಿಟ್ ಹಿಂದಿನ ವಾಸ್ತವ ಅರಿತುಕೊಳ್ಳಲು ಸಾಧ್ಯವಾಗಲಿಲ್ಲ. ಹೆಚ್ಚಿನ ಅರಿವಿನ ಸಾಮರ್ಥ್ಯ ಇರುವವರು ಇಂತಹ ಅಪಪ್ರಚಾರಕ್ಕೆ ಕಿವಿಗೊಡಲಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಅರಿವಿನ ಸಾಮರ್ಥ್ಯ ಹಾಗೂ ವಿಶ್ಲೇಷಣಾ ಚಿಂತನೆ ಕಡಿಮೆ ಇರುವವರು ಅಪಪ್ರಚಾರವನ್ನು ಗುರುತಿಸುವಲ್ಲಿ ವಿಫಲವಾದರು ಎಂದು ಅಧ್ಯಯನದ ನೇತೃತ್ವ ವಹಿಸಿದ್ದ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ ಕ್ರಿಸ್ ಡಾವ್ಸನ್ ಹೇಳಿದ್ದಾರೆ.

3,183 ದಂಪತಿಗಳು ಬ್ರೆಕ್ಸಿಟ್ ವೇಳೆ ಮತ ಚಲಾಯಿಸಿದ ವಿಧಾನದ ಅಧ್ಯಯನ ಮಾಡಿ ಬಾತ್ ವಿಶ್ವವಿದ್ಯಾನಿಲಯದ ಸಂಶೋಧಕರು ವರದಿ ರೂಪಿಸಿದ್ದಾರೆ.

ಹೆಚ್ಚಿನ ಅರಿವಿನ ಸಾಮರ್ಥ್ಯ ಉಳ್ಳವರಲ್ಲಿ ಶೇ.73ರಷ್ಟು ಜನರು ಯುರೋಪ್ ಒಕ್ಕೂಟದಲ್ಲಿ ಮುಂದುವರೆಯುವುದರ ಪರ ಮತ ಚಲಾಯಿಸಿದ್ದರು. ಆದರೆ, ಅರಿವಿನ ಸಾಮರ್ಥ್ಯ ಕಡಿಮೆ ಇದ್ದವರಲ್ಲಿ ಶೇ.40ರಷ್ಟು ಜನ ಮಾತ್ರ ಒಕ್ಕೂಟದಲ್ಲಿ ಮುಂದುವರೆಯುವುದರ ಪರ ಮತ ಚಲಾಯಿಸಿದ್ದರು.

ಅರಿವಿನ ಸಾಮರ್ಥ್ಯ ಕಡಿಮೆ ಇದ್ದಾಗ ನಿರ್ಧಾರ ತೆಗೆದುಕೊಳ್ಳುವಲ್ಲಿ ಲೋಪವಾಗುತ್ತವೆ. ಒಕ್ಕೂಟದಿಂದ ಹೊರ ಬರಬೇಕೆಂದು ಮತ ಚಲಾಯಿಸಿದ ಹಲವರು ಈಗ ತಮ್ಮ ನಿರ್ಧಾರಕ್ಕೆ ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದು ಅಧ್ಯಯನ ಹೇಳಿದೆ.

ಅಪಪ್ರಚಾರ ಮಾಡುವುದು ಯಾವ ರೀತಿ ಜನರ ದಾರಿ ತಪ್ಪಿಸುತ್ತದೆ ಹಾಗೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಕಡೆಗಣಿಸುತ್ತದೆ ಎಂಬುದರ ಬಗ್ಗೆಯೂ ಈ ಅಧ್ಯಯನ ಬೆಳಕು ಚೆಲ್ಲಿದೆ.

### ನೆದರ್‌ಲ್ಯಾಂಡ್ಸ್‌ನಲ್ಲೀಗ 'ನೆಕ್ಸಿಟ್' ಕರೆ

ಯುರೋಪ್‌ನಲ್ಲಿ ಬಲಪಂಥೀಯ ಅಲೆ ತೀವ್ರವಾಗುತ್ತಿರುವುದಕ್ಕೆ ನೆದರ್‌ಲ್ಯಾಂಡ್ಸ್‌ನಲ್ಲಿ ಗೀರ್ಟ್ ವಿಲ್ಡರ್ಸ್ ಅವರು ಚುನಾವಣಾ ಮುನ್ನಡೆ ಗಳಿಸಿರುವುದು ಉದಾಹರಣೆಯಾಗಿದೆ.

ಚುನಾವಣಾ ಮುನ್ನಡೆಯ ನಂತರ ವಿಲ್ಡರ್ಸ್ ಅವರು ಯುರೋಪ್ ಒಕ್ಕೂಟದಿಂದ ಹೊರ ಬರುವ ವಾದ ಮುಂದಿಡುತ್ತಿದ್ದಾರೆ. ನೆದರ್‌ಲ್ಯಾಂಡ್ಸ್ ಒಕ್ಕೂಟದಿಂದ ಹೊರ ಬರಲು 'ನೆಕ್ಸಿಟ್' ಎಂಬ ಹೆಸರಿನಲ್ಲಿ ಜನಮತಗಣನೆ ನಡೆಸಬೇಕು ಎಂದವರು ಒತ್ತಾಯಿಸುತ್ತಿದ್ದಾರೆ.

ಆದರೆ, ಸಾಂಪ್ರದಾಯಿಕವಾಗಿ ನೆದರ್‌ಲ್ಯಾಂಡ್ ಮೈತ್ರಿಕೂಟದ ಆಡಳಿತ ಹೊಂದಿದೆ. ಹೀಗಾಗಿ ವಿಲ್ಡರ್ಸ್ ಒಬ್ಬರೇ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಮಿತ್ರ ಪಕ್ಷಗಳ ನೆರವು ಬೇಕಾಗುತ್ತದೆ. ಆದರೆ, ಯುರೋಪಿನ ಹಲವು ದೇಶಗಳಲ್ಲಿ ಬಲಪಂಥೀಯರು ಹಾಗೂ ರಾಷ್ಟ್ರೀಯವಾದಿಗಳು ಮುನ್ನಡೆ ಸಾಧಿಸುತ್ತಿರುವುದು ಯುರೋಪ್ ಒಕ್ಕೂಟದ ಮೇಲಿನ ಒತ್ತಡ ಹೆಚ್ಚಿಸಿದೆ.

# ಒಮ್ಮುಖ ರಸ್ತೆಯಲ್ಲಿ ಬಂದವರಿಗೆ ಬಿಸಿ ಬಿಸಿ ವಡಾ

## ವಿನೂತನವಾಗಿ ಅರಿವು ಮೂಡಿಸಿದ ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್



ದಾವಣಗೆರೆ, ನ.29- ನಗರದಲ್ಲಿ ಒಮ್ಮುಖ ರಸ್ತೆಯಲ್ಲಿ ರಾಜಾರೋಷವಾಗಿ ಬರುತ್ತಿದ್ದ ವಾಹನ ಚಾಲಕರಿಗೆ ಇಂದು ಬಿಸಿ ಬಿಸಿ ಉದ್ದಿನ ವಡಾ ಸಿಕ್ಕಿವೆ.

ಹೌದು, ಪದೇ ಪದೇ ಸಂಚಾರಿ ನಿಯಮ ಉಲ್ಲಂಘಿಸುತ್ತಿದ್ದ ಚಾಲಕರನ್ನು ಕಂಡು ಬೇಸತ್ತ ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್, ಬುಧವಾರ ಸಂಜೆ ಇಂತಹದ್ದೊಂದು ವಿನೂತನ ಪ್ರಯತ್ನಕ್ಕೆ ಕೈ ಹಾಕಿದ್ದರು.

ಒಮ್ಮುಖ ರಸ್ತೆಯಾಗಿದ್ದ ಎವಿಕೆ ಕಾಲೇಜು ರಸ್ತೆಯಲ್ಲಿ ಬರುತ್ತಿದ್ದ ವಾಹನಗಳನ್ನು ತಡೆದು ಸವಾರರಿಗೆ ವಡಾ ಕೊಡಲಾರಂಭಿಸಿದರು. ಜೊತೆಗೆ ಅವರು ಹೇಳುತ್ತಿದ್ದುದು ಇಷ್ಟು ! 'ಸಂಚಾರ ನಿಯಮ ಉಲ್ಲಂಘಿಸಿ ನೀವು ಅಪಘಾತದಲ್ಲಿ ಮೃತಪಟ್ಟರೆ ಮನೆಯವರೆಲ್ಲಾ ತಿಥಿ ಮಾಡಿ ವಡೆ ತಿಂತಾರೆ. ಹಾಗಾಗಿ, ಮೊದಲು ನೀವೇ ವಡಾ ತಿನ್ನಿ. ಆಗಲಾದರೂ ನಿಮಗೆ ನೆನಪಿಗೆ ಬರಬಹುದು. ವಡಾ ತಿಂದಾದರೂ ಸಂಚಾರಿ ನಿಯಮ ಪಾಲಿಸಿ'

ಹೀಗೆ ಹೇಳುತ್ತಾ ಅವರಿಂದ ವಡ ಸ್ವೀಕರಿಸುತ್ತಿದ್ದವರಲ್ಲಿ ಬಹುಪಾಲು ದ್ವಿಚಕ್ರವಾಹನ ಚಾಲಕರು, ಈ ಪೈಕಿ ಓರ್ವ ಪೊಲೀಸ್ ಸಹ ಇದ್ದುದು ವಿಶೇಷ. ಕೆಲವರು ವಡಾ ಕೈಯಲ್ಲಿಡಿದು ತಪ್ಪು ಒಪ್ಪಿಕೊಂಡು ಹಿಂತಿರುಗಿದರೆ, ಮತ್ತೆ ಕೆಲವರು ದರ್ಪದಿಂದ ಹಾಗೆಯೇ ಸಾಗುತ್ತಿದ್ದರು.

ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಶ್ರೀಕಾಂತ್, ಒಮ್ಮುಖ ರಸ್ತೆಯಾಗಿದ್ದರೂ ನಿಯಮ ಪಾಲನೆ ಮಾಡುತ್ತಿಲ್ಲ. ಸಾಕಷ್ಟು ಬಾರಿ ಅರಿವು ಮೂಡಿಸಿ, ಕೊನೆಗೆ ಈ ನಿರ್ಧಾರಕ್ಕೆ ಬರಲಾಯಿತು. ಇಂದು ದ್ವಿಚಕ್ರ ವಾಹನ ಸವಾರರೂ, ಆಟೋ ಚಾಲಕರು ಸೇರಿದಂತೆ ಶಾಲಾ ವಾಹನವನ್ನೂ ತಡೆದು ಅರಿವು ಮೂಡಿಸಿದ್ದೇವೆ. ನಮ್ಮ ಈ ಕಾರ್ಯಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಇನ್ನಾದರೂ ಸಾರ್ವಜನಿಕರು ನಿಯಮ ಪಾಲಿಸಲಿ ಎಂದು ಆಶಿಸಿದರು.

ಬೆಳಿಗ್ಗೆ 9 ಗಂಟೆಗ ಒಳಗೆ ಹಾಗೂ ರಾತ್ರಿ 9 ಗಂಟೆಯ ನಂತರ ಒಮ್ಮುಖ ರಸ್ತೆಯಲ್ಲಿ ಸಂಚರಿಸಬಹುದು ಎಂದು ಅನೇಕರು ಭಾವಿಸಿದ್ದಾರೆ. ಅದರೆ ಅದು ತಪ್ಪು. ದಿನದ ಇಪ್ಪತ್ನಾಲ್ಕು ಗಂಟೆಯೂ ಅದು ಒಮ್ಮುಖ ರಸ್ತೆಯಾಗಿರುತ್ತದೆ. ಯಾವುದೇ ವೇಳೆಯಾಗಲಿ ನಿಯಮ ಪಾಲಿಸಿದಲ್ಲಿ ಅಪಘಾತಗಳನ್ನು ತಡೆಯಬಹುದು ಎಂದವರು ಹೇಳಿದರು.

ಜನಸಂದಣಿ ಹೆಚ್ಚಾಗಿರುವ ರಸ್ತೆಗಳಲ್ಲಿ ಸಿಸಿ ಟಿವಿ ಪರಿಶೀಲಿಸಿ ದಂಡ ವಿಧಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿರುವುದಾಗಿಯೂ ಶ್ರೀಕಾಂತ್ ಹೇಳಿದರು. ವಡಾ ವಿತರಣೆ ವೇಳೆ ಏರೋಫಿಟ್ ಮಂಜು, ಆನೆಸಿದ್ದ ಇತರರಿದ್ದರು.

# ಕುಲದ ಕತ್ತಲೆ ಕಳೆದು, ಸಮತೆಯ ಬೆಳಕು ಬೀರಿದ ದಾಸಶ್ರೇಷ್ಠ...

***ಕುಲ ಕುಲ ಕುಲವೆಂದು ಹೊಡೆದಾಡದಿರಿ***
***ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ***
***ಹರಿಯೇ ಸರ್ವೋತ್ತಮ, ಹರಿಯೇ ಸರ್ವೇಶ್ವರ***
***ಹರಿಮಯವೆಲ್ಲವೆನುತ ತಿಳಿದು***
***ಸಿರಿಕಾಗಿ ನೆಲೆಯಾಗಿ ಕೇಶವ ರಾಯನ***
***ಚರಣ ಕಮಲ ಕೀರ್ತಿ ಸುವನೆ ಕುಲಜ.***

ಇದು ದಾಸರ ಪದಗಳಲ್ಲಿ ಶ್ರೇಷ್ಠ ಕೀರ್ತನೆ. ಇವರು ಹಾವೇರಿ ಜಿಲ್ಲೆಯ ಈಗಿನ ಶಿಗ್ಗಾವಿ ತಾಲ್ಲೂಕಿನ ಬಾಡ ಎಂಬ ಗ್ರಾಮದಲ್ಲಿ ಜನಿಸಿದರು. ಇವರ ತಾಯಿ ಬಚ್ಚಮ್ಮ ಧಾರ್ಮಿಕತೆಯಲ್ಲಿ ನಂಬಿಕೆ ಉಳ್ಳವರಾಗಿದ್ದರು, ಇವರ ತಂದೆ ಬೀರಪ್ಪ ನಾಯಕ ವಿಜಯನಗರ ಸಾಮ್ರಾಜ್ಯದ ಬಂಕಾಪುರದಲ್ಲಿ ದಂಡನಾಯಕರಾಗಿದ್ದರು. ಕನಕದಾಸರು 1508 ರಿಂದ 1608ರ ಕಾಲದವರು. ಇವರು ತಿರುಪತಿ ತಿಮ್ಮಪ್ಪನ ಆಶೀರ್ವಾದದಿಂದ ಹುಟ್ಟಿದ್ದರಿಂದ ಇವರಿಗೆ ತಿಮ್ಮಪ್ಪ ನಾಯಕ ಎಂದು ಹೆಸರಿಟ್ಟಿದ್ದರು, ಇವರು ಕರ್ನಾಟಕದಲ್ಲಿ 16ನೇ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಇವರು ಬಾಲ್ಯದಲ್ಲಿಯೇ ವೀರ ಶೂರರಾಗಿದ್ದರು, ಇವರ ತಾಯಿಗೆ ಆಟ ಆಡಿ ಬರುತ್ತೇನೆ ಎಂದು ಹೇಳಿ ಕಾಡಿಗೆ ಹೋಗುತ್ತಿದ್ದರಂತೆ. ಗವಿಯಲ್ಲಿ ಮಲಗಿರುವ ಹುಲಿಯನ್ನು ಎಬ್ಬಿಸಿ ನಿರಾಯುಧರಾಗಿ ಸೆಣಸಾಡುತ್ತಿದ್ದರು.

ತಿಮ್ಮಪ್ಪ ನಾಯಕರು ಒಮ್ಮೆ ಹೊಲದಲ್ಲಿ ಕೆಲಸ ಮಾಡುವಾಗ ಇವರಿಗೆ ಅಪಾರವಾದ ಧನ ಕನಕ ನಗ ನಾಣ್ಯ ವಜ್ರ ವೈಢೂರ್ಯ ದೊರಕುತ್ತದೆ. ಅದನ್ನು ಸ್ವಂತಕ್ಕೆ ಉಪಯೋಗಿಸದೆ ಬಡ ಭಕ್ತರಿಗೆ ಹಂಚಿ ವಿಜಯನಗರ ಸಾಮ್ರಾಜ್ಯಕ್ಕೆ ಅರ್ಪಿಸುತ್ತಾರೆ. ದಾನ ಮಾಡುತ್ತಾರೆ ಅಂದಿನಿಂದ ಅವರಿಗೆ ಕನಕನಾಯಕ ಎಂದು ಹೆಸರಾಯಿತು.

ಇವರ ತಂದೆ ಬೀರಪ್ಪ ನಾಯಕ ದಂಡ ನಾಯಕರಾಗಿರುತ್ತಾರೆ. ತಂದೆ ಸ್ವರ್ಗಸ್ಥರಾದ ನಂತರ ಅರಸರ ಸೇನೆಯನ್ನು ಸೇರಿಕೊಳ್ಳುತ್ತಾರೆ. ಹಲವು ಸಮರಗಳಲ್ಲಿ ಭಾಗವಹಿಸಿ, ವೀರ ಯೋಧ ಎಂಬ ಪ್ರಶಸ್ತಿಗೆ ಪಾತ್ರರಾದರು ತದನಂತರ ಒಂದು ಯುದ್ಧದಲ್ಲಿ ಸೋಲನ್ನು ಅನುಭವಿಸುತ್ತಾರೆ. ಯುದ್ಧದಲ್ಲಿ ಸಾವು-ನೋವುಗಳನ್ನು ಕಂಡು ಮನನೊಂದು ದೇವರನ್ನು ಪ್ರಾರ್ಥಿಸಿದಾಗ ಅವರು ಗುಣಮುಖರಾಗ್ತಾರೆ. ಒಮ್ಮೆ ಕನಸಿನಲ್ಲಿ ಕೃಷ್ಣನು ಬಂದು ನನ್ನ ದಾಸನಾಗು ಎಂದು ಹೇಳಿದಾಗ, ಕನಕ ಅಂದಿನಿಂದ ಅವರು ಕನಕದಾಸರಾಗುತ್ತಾರೆ.



ಮುಂದೆ ವಿಜಯನಗರದ ರಾಜಗುರು ತಿರುಮಲೆ ಆಚಾರ್ಯ ಅವರ ಹತ್ತಿರ ವೈಷ್ಣವ ದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ವ್ಯಾಸರಾಯ ಸ್ವಾಮಿಗಳ ಶಿಷ್ಯರಾಗಿ ವೇದಾಂತ ರಹಸ್ಯಗಳನ್ನು ತಿಳಿದುಕೊಳ್ಳುತ್ತಾರೆ. ಅವರಿಂದ ದಾಸ ದೀಕ್ಷೆ ಪಡೆದು ಹರಿದಾಸರಾಗುತ್ತಾರೆ. ಅಲ್ಲಿಯೇ ಇದ್ದು ನೂರಾರು ದೇವರ ನಾಮಗಳನ್ನು ರಚಿಸಿ, ಇವರು ಮಹತ್ವ ಪ್ರಭಾವಕ್ಕೆ ಒಳಗಾದ ಭಾಗವತ ದೃಷ್ಟಿಯ ಕವಿ ಕೀರ್ತನಕಾರ. ಕನಕದಾಸರು ಸಾಮಾಜಿಕದಿಂದ ಬಂದು ದಾಸ ದೀಕ್ಷೆಯನ್ನು ಪಡೆದು, ಉತ್ತಮ ಕೃತಿಗಳನ್ನು ರಚಿಸಿ ದಾಸ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಕೊಟ್ಟರು.

ಇವರ ಅಂಕಿತ ನಾಮ ಆದಿಕೇಶವ. ಕೀರ್ತನೆಗಳನ್ನು ತತ್ವ ಗರ್ಭಿತವಾದ ಮುಂಡಿಗೆಗಳನ್ನು ರಚಿಸಿದರು. ಅನೇಕ ಕೃತಿಗಳನ್ನು ರಚಿಸಿದರು. ಇವರ ಕೃತಿಗಳು ಸಾಧಾರಣವಾಗಿರಲಿಲ್ಲ. ಅವುಗಳಲ್ಲಿ ಮೌಢ್ಯ ಕಂದಾಚಾರ, ಪೊಳ್ಳು ನಂಬಿಕೆ ವರ್ಣ ವ್ಯವಸ್ಥೆಯನ್ನು ಖಂಡಿಸಿದ್ದಾರೆ.

ಕನಕದಾಸರ ಕಾವ್ಯಗಳಲ್ಲಿ ಮೋಹನ ತರಂಗಿಣಿ, ಸಾಂಗತ್ಯ ಗ್ರಂಥ ಭಾರತ, ಭಾಗವತಗಳಲ್ಲಿ ಬರುವ ಉಷಾ ಅನಿರುದ್ಧ ಪ್ರಸಂಗ, ಕೃಷ್ಣ ಬಾಣಸುರ ಯುದ್ಧ, ಶಂಭರಾಸುರವದೇ. ಕಾವ್ಯದ ವಸ್ತು. ವಸ್ತು ಪೌರಾಣಿಕವಾದರೂ ಕಾವ್ಯದಲ್ಲಿ ಅಲ್ಲಲ್ಲಿ ಸಮಕಾಲೀನ ಜೀವನ ವರ್ಣನೆ ಇದೆ.

ಈ ಕಾವ್ಯವನ್ನು ಕೃಷ್ಣ ಚರಿತ್ರೆ ಎಂದು ಕರೆಯಲಾಗಿದೆ. ಇವರ ಕೃತಿಯಲ್ಲಿ ಇನ್ನೊಂದು ಮಹಾಕಾವ್ಯವೆಂದರೆ ನಳಚರಿತ್ರೆ... ಇದು ಅತ್ಯಂತ ರಮ್ಯವಾದ ಒಂದು ಕಥನ ಕಾವ್ಯವಾಗಿ ಮಹಾಭಾರತ ಕಥೆಯನ್ನು ಮೂಲವಾಗಿ ಹೊಂದಿರುವ ಭಾಮಿನಿ ಷಟ್ಪದಿಯಲ್ಲಿ ಬರೆದಿರುವ ಕೃತಿ ಪಾತ್ರ ರಚನೆ. ಸ್ಪಷ್ಟ ರಸಪೋಷಣೆ ಚೆನ್ನಾಗಿದೆ ರಮ್ಯ ಮಿಶ್ರಣವುಳ್ಳ ಭಾಷೆ ಸರಳವಾಗಿದೆ ಮೋಹಕವಾಗಿದೆ. ಹರಿಭಕ್ತಸಾರ... ಕೃತಿಯು ಭಾಮಿನಿ ಷಟ್ಪದಿಯಲ್ಲಿದೆ. ನೀತಿ, ತತ್ವಗಳು ಬೆರೆತಿರುವುದಾದರೂ ಇದು ಪ್ರಧಾನವಾಗಿ ಭಕ್ತಿ ಕಾವ್ಯ.

ರಾಮಧ್ಯಾನ ಚರಿತ್ರೆ... ಇದು ಒಂದು ಖಂಡ ಕಾವ್ಯವಾಗಿ ಭತ್ತ ಮತ್ತು ರಾಗಿ ತಮ್ಮಲ್ಲಿ ಯಾರು ಹೆಚ್ಚು ಎಂಬ ವಿವಾದ ಉಂಟಾಗಿ ಶ್ರೀರಾಮನೆದುರು ರಾಗಿಯೇ ವಿಜಯಿ ಯಾಯಿತು. ಶ್ರೀರಾಮ ಅದಕ್ಕೆ ರಾಘವ ಎಂದು ಹೆಸರು ಕೊಟ್ಟನಂತೆ ಹೀಗಾಗಿ ರಾಮಧಾನ್ಯವಾಯಿತು. ದೇವರು ಬಡವರ, ಭಕ್ತರ ಪಕ್ಷಪಾತಿ ಎಂಬ ಮನೋಭಾವ ಈ ಕಾವ್ಯದಲ್ಲಿದೆ.

ಕನಕದಾಸರ ಕವಿತಾ ಶಕ್ತಿ ಸಂಪೂರ್ಣವಾಗಿ ಅರಳಿರುವುದು ಅವರ ಕೀರ್ತನೆಗಳಲ್ಲಿ. ವಿಚಾರ ಸ್ವಾತಂತ್ರ್ಯದಲ್ಲಿ ಕವಿತಾ ಶಕ್ತಿಯಲ್ಲಿ ಇವರ ಪ್ರಭಾವಶಾಲಿ ಅಂತರಂಗದ ಆಳವನ್ನು, ಭಕ್ತಿ ನಿರ್ಭಯತೆಯನ್ನು ತಿಳಿಸುವ ಕೀರ್ತನೆಗಳನ್ನು ನುಡಿಸಿ ಮೆರಗು ನೀಡುವ ಹಿರಿಯ ಭಾವಗೀತೆಗಳಾಗಿವೆ. ಸಂಗೀತದ ಪರಿಚಯ ಪ್ರಪಂಚಾನುಭಾವ ಅವರ ರಚನೆಗಳಲ್ಲಿ ಎದ್ದು ಕಾಣುವ ಅಂಶಗಳು. ಸಹಜ ಪ್ರತಿಭೆ, ಕಲ್ಪನೆ. ಭಾಷೆ ಪ್ರಭುತ್ವಗಳಿಂದ ಕನಕದಾಸರು ಶ್ರೇಷ್ಠ ಕವಿಯಾಗಿ ಬೆಳಗಿದ್ದಾರೆ. ಸತ್ಯ ಹಾಗೂ ರಚನೆಯ ದೃಷ್ಟಿಯಿಂದ ಅದು ಕನ್ನಡ ಸಾರಸ್ವತ ಸಂಪತ್ತನ್ನು ಹೆಚ್ಚಿಸಿವೆ. ಉಡುಪಿಯಲ್ಲಿ ಶ್ರೀಕೃಷ್ಣನ ದರ್ಶನ ಕ್ಕೆಂದು ಹೋಗಿ ಅಲ್ಲಿ ಭಕ್ತಿಯಿಂದ ಹಾಡುತ್ತಿರುತ್ತಾರೆ. ಆದರೆ ಅಲ್ಲಿರುವ ಬ್ರಾಹ್ಮಣೋತ್ತಮರು ಇವರನ್ನು ದೇವಸ್ಥಾನದ ಒಳಗೆ ಬಿಡಲು ನಿರಾಕರಿಸುತ್ತಾರೆ. ಆಗ ಕನಕದಾಸರು ದೇವಸ್ಥಾನದ ಹಿಂಬದಿಯಲ್ಲಿ ಕುಳಿತು ಭಕ್ತಿಯಿಂದ ಅಂತ ರಾಳದಿಂದ ಕೃಷ್ಣನನ್ನು ವಿನಯದಿಂದ ಪ್ರಾರ್ಥಿಸುತ್ತಾರೆ.

ಬಾಗಿಲನು ತೆರೆದು ಸೇವೆಯನ್ನು ಕೊಡು ಹರಿಯೇ ಎಂದು ಭಕ್ತಿಯಿಂದ ಹಾಡಿ, ಕೃಷ್ಣ ದರ್ಶನ ಪಡೆದು ಕೊಳ್ಳುತ್ತಾರೆ. ಈಗಲೂ ಕೂಡ ನಾವು ಕನಕನ ಕಿಂಡಿ ಯಿಂದಲೇ ಕೃಷ್ಣನ ದರ್ಶನವನ್ನು ಪಡೆಯಬಹುದಾಗಿದೆ.

ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನ ಕಾರರು 36 ಕೀರ್ತನೆಗಳನ್ನು ರಚಿಸಿದ್ದಾರೆ. 250ಕ್ಕೂ ಹೆಚ್ಚು ದಾಸರಲ್ಲಿ ಇಬ್ಬರು ದಾಸರು ಶ್ರೇಷ್ಠ ದಾಸರು. ಕನಕದಾಸರು ಮತ್ತು ಪುರಂದರದಾಸರು ಇವರಿಬ್ಬರೂ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಿದ್ದಾರೆ.



**- ಸುಶೀಲ ಬಸವರಾಜ್ ಹಿರೇಮಠ್**
ಕರ್ನಾಟಕ ಲೇಖಕಿಯರ ಸಂಘ,
ದಾವಣಗೆರೆ.

## ಕನಕದಾಸರಿಗೆ ನಮನ

ದಾಸರು ಇವರು ಕನಕದಾಸರು
ದಾಸರಲ್ಲಿ ಬಲು ಶ್ರೇಷ್ಠದಾಸರು
ದಾಸದಾಸರ ದಾಸನಾನೆಂದವರು
ಅಸಮಾನ ಕೃಷ್ಣನ ತಿರುಗಿಸಿದವರು

ಮಂಡೆಗೆ ಸವಾಲು ಹಾಕುತ್ತಿದ್ದವರು
ಮುಂಡಿಗೆಗಳಲಿ ಸ್ತುತಿ ಮಾಡಿದರು
ಕಂಡ ಕಂಡಲ್ಲಿ ಹರಿಯ ಕಂಡವರು
ಅಂಡಜವಾಹನನ ನಿಜ ಭಕ್ತರು

ವ್ಯಾಸರಾಯರಿಗೆ ಬಲು ಪ್ರಿಯ ಶಿಷ್ಯರು
ದಾಸತ್ವದಲ್ಲಿ ಸಮವಿಲ್ಲದವರು
ಅಸಮಾನ ಸಾಹಿತ್ಯ ಸುಧೆ ಕೊಟ್ಟವರು
ಹೊಸ ಚಿಂತನೆಗಳ ತುಂಬಿದರು

ಅನುಭಾವಗಳ ಪದಗಳಲಿ ತುಂಬುತ
ಅನುಭವಿಸಿದ ಆನಂದವ ಹಂಚುತ
ತನುಮನ ಹರಿಯಲಿ ಸ್ಥಿರವಾಗಿಡುತ
ಅನುಪಮ ಸ್ತುತಿಗಳ ಹಾಡಿದವರು

ಬಾಡದಾದಿಕೇಶವನ ಆರಾಧಿಸುತ
ಬಿಡದೆ ಪ್ರತಿಕ್ಷಣವೂ ಕೊಂಡಾಡುತ
ಸಡಗರದಿ ಕಾಗಿನೆಲೆಯಲಿ ಸ್ಥಾಪಿಸುತ
ಕಡೆಯತನಕ ಅಲ್ಲಿ ಸೇವೆ ಮಾಡುತ

ನಳಚರಿತ್ರೆ ಮೋಹನ್ ತರಂಗಿಣಿಯು
ಒಳ ಅರ್ಥ ತುಂಬಿದ ಹರಿಭಕ್ತಿಸಾರವು
ಒಳ್ಳೆಯ ರಾಗಿಗೆ ರಾಮಧಾನ್ಯ ಚರಿತ್ರೆಯು
ಹೊಳೆವ ಜ್ಞಾನದ ಸುಧೆ ತುಂಬಿದ ಕಾವ್ಯವು

ಕೆಣಕಿದವರ ತಿಣುಕುವಂತೆ ಮಾಡಿದವರು
ಕಣಕಣದಲು ಹರಿಭಕ್ತಿ ತುಂಬಿದವರು
ಕುಣಿಕುಣಿದು ಭಕ್ತಿರಸದಿ ಮಿಂದೆದ್ದವರು
ಕುಣಿಸಿ ಕೃಷ್ಣನ ನೋಡಿದ ಧನ್ಯರು

ಆಡುಭಾಷೆಲಿ ಭಕ್ತಿಯ ಹೊದಿಕೆ ಹೆಣೆಯುತ
ಬಿಡು ತಲ್ಲಣ ಹರಿಯ ನಂಬೆಂದೆನುತ
ಬಡಿದೆಬ್ಬಿಸುವಂಥ ನುಡಿಗಳ ಹಾಡುತ
ನಡೆದರು ಬಾಲಗೋಪಾಲವಿಠಲಗೆ ಬಾಗುತ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ಪ್ರೀತಿ...

ಕುಲ ಕುಲ ವೆಂದು ಮೆರೆಯದಿರಿ
ನೆಲ ಜಲ ಒಂದೇ ಸರ್ವ ಧರ್ಮಕ್ಕೂ
ಸಲ್ಲದು ಜಾತಿಯತೆ ಮೌಢ್ಯ
ಬಲ್ಲವರಾರು ಇದರ ನೆಲೆ

ಸೂರ್ಯ ಚಂದ್ರ ಬೆಳಕನ್ನಿವರು ನಿಸ್ವಾರ್ಥದಿ
ಭೂತಾಯಿ ಬೆಳೆ ನೀಡುವಳು ಭೇದವಿಲ್ಲದೆ
ಮನುಜರಲ್ಲೇಕೆ ಈ ವೈಷಮ್ಯ
ಹೀನ ಉಚ್ಚ ಕುಲವೆಂಬ ತಾರತಮ್ಯ

ಎಳೆಯಬೇಕು ಪ್ರೀತಿಯ ತೇರು
ಸೆಳೆಯಬೇಕು ಎಲ್ಲರ ಪ್ರೀತಿಯಲಿ
ಇಳೆಯಲಿ ಸರ್ವರ ಪ್ರೀತಿಯಲಿ ಬೆಸೆದು
ನಾಳಿನ ರಾಮರಾಜ್ಯದ ನಾಂದಿ ಹಾಡಿ

ಜಾತಿ ಮತ ಭೇದವ ತೊರೆದು
ಪ್ರೀತಿ ಎಂಬ ಹೊತ್ತಿಗೆಯ ಓದಿ
ಮತ್ತೆ ಎಲ್ಲರಲಿ ಒಲವನ್ನು ಹರಡಿ
ಸುತ್ತೆಲ್ಲ ಹರಡುವುದು ನೆಮ್ಮದಿ

ಬದುಕಲಿ ಬರುವುವು ಅಡೆ ತಡೆಗಳು
ಬಾಳ ರಥ ಎಳೆಯಬೇಕು ಪ್ರೀತಿಯೊಳು
ಬಾಳ ದೋಣಿಯಲಿ ಪ್ರೇಮದ ಹುಟ್ಟು ಹಾಕಲು
ಅರಳುವುವು ಸುಂದರ ಸುಮಗಳು

ದ್ವೇಷಿಸುವವರಿಗೂ ಪ್ರೀತಿ ತೋರು
ಅನ್ಯಾಯ ಮಾಡಿದವರಿಗೂ ಕಳ ಕ ಳಿ ತೋರು
ಮೋಸ ವಂಚನೆ ಬೇಡ ಇಲ್ಲಿ
ಜಗತ್ತೆಂಬ ಹೂ ದೋಟದಲ್ಲಿ

**- ಕೋಮಲ ವಿ ಕುಮಾರ್**

## ಕನಕದಾಸ

ತಿರುಪತಿ ತಿಮ್ಮಪ್ಪನ ಕೃಪೆಯಿಂದ ಜನಿಸಿದಿರಿ ಕನಕ
ಅಂದು ಆಗಿದ್ದೀರಿ ಬಂಕಾಪುರದ ಢಣಾಯಕ
ನಿಮ್ಮ ಕೀರ್ತಿ ಹಬ್ಬಿತ್ತು ವಿಜಯನಗರ ತನಕ
ಅಶ್ವಿನಿ ದೇವತೆಗಳಾದಿರಿ ದಾಸ ಸಾಹಿತ್ಯ ಲೋಕಕೆ.
ಶ್ರೀನಿವಾಸನ ಒಲುಮೆಯಿಂದ ಆದಿರಿ ಕನಕದಾಸ
ಹಂಪಿಯಲ್ಲಿ ದೊರೆಯಿತು ವ್ಯಾಸರಾಯರ ವಿಶ್ವಾಸ
ಗುರುಕುಲದಲ್ಲಿ ಪಡೆದಿರಿ ಪುರಂದರರ ಸಹವಾಸ
ಉಡುಪಿಯಲ್ಲಿ ಒಲಿದ ನಿಮಗೆ ನಮ್ಮ ಆದಿಕೇಶವ

**- ಎಂ ಎಸ್ ಬಿರಾದಾರ್**
ಕನ್ನಡ ಶಿಕ್ಷಕರು, ಮಳಲಕೆರೆ, ದಾವಣಗೆರೆ.

# ಗುತ್ತಿಗೆದಾರರನ್ನು ಆತ್ಮಹತ್ಯೆಗೆ ದೂಡಬಾರದು ಬಾಕಿ ಪಾವತಿಸಲು ಹೈಕೋರ್ಟ್ ಸೂಚನೆ

ಬೆಂಗಳೂರು, ನ. 26 – ಬಾಕಿ ಪಾವತಿಯಾಗದ ಕಾರಣ ಇಬ್ಬರು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸರ್ಕಾರದ ವರದಿಗಳೇ ತಿಳಿಸಿವೆ. ಗುತ್ತಿಗೆದಾರರ ಬಾಕಿ ಉಳಿಸಿಕೊಂಡು ಅವರನ್ನು ಈ ಸ್ಥಿತಿಗೆ ದೂಡಬಾರದು ಎಂದು ಹೈಕೋರ್ಟ್ ತಿಳಿಸಿದೆ.

ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರಿಗೆ ನೀಡಬೇಕಾದ ಬಾಕಿ ಪಾವತಿಸುತ್ತಿಲ್ಲ. ಕೋರ್ಟ್ ಆದೇಶದ ನಂತರವೂ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ನಿಕ್ಷೇಪ್ ಇನ್‌ಫ್ರಾ ಪ್ರಾಜೆಕ್ಟ್ಸ್ ಕಂಪನಿಯು ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ದಾಖಲಿಸಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನು ಒಳಗೊಂಡ ಪೀಠ, ಗುತ್ತಿಗೆದಾರರನ್ನು ಸಂಕಷ್ಟಕ್ಕೆ ದೂಡದಂತೆ ತಿಳಿಸಿದೆ.

ಗುತ್ತಿಗೆದಾರರು ಬಿಲ್‌ಗಳನ್ನು ಸಲ್ಲಿಸಿದ ಹಿರಿತನದ ಆಧಾರದ ಮೇಲೆ ಹಣ ಪಾವತಿಸುತ್ತಿರುವುದಾಗಿ ಬೆಂಗಳೂರು ನಗರ ಪಾಲಿಕೆ ತಿಳಿಸಿತ್ತು. ಬಾಕಿ ಪಾವತಿಸುವಂತೆ ಅಕ್ಟೋಬರ್ 30, 2023ರಲ್ಲೇ ಆದೇಶ ಹೊರಡಿಸಲಾಗಿತ್ತು. ಇಷ್ಟಾದರೂ ಪಾಲಿಕೆಯು ಪೂರ್ಣಗೊಂಡ ಕಾಮಗಾರಿಗಳ ಬಾಕಿ ಉಳಿಸಿಕೊಂಡಿದೆ ಎಂದು ಹೈಕೋರ್ಟ್ ಆಕ್ಷೇಪಿಸಿದೆ.

ಯಶಸ್ವಿ ಬಿಡ್‌ದಾರ ಎಲ್ಲಾ ಕೆಲಸಗಳನ್ನು ಪೂರೈಸಿದ ನಂತರವೂ ಬಿಲ್ ಪಾವತಿಸಲು ತಡ ಮಾಡಬಾರದು. ಕಲ್ಯಾಣ ರಾಜ್ಯದಲ್ಲಿ ಗುತ್ತಿಗೆದಾರ ಅಕಾರಣವಾಗಿ ಪಾವತಿಗಾಗಿ ಅಲೆದಾಡುವಂತೆ ಮಾಡಬಾರದು. ಈ ಪ್ರಕರಣದಲ್ಲಿ ಗುತ್ತಿಗೆದಾರನಿಗೆ ಹಣ ಪಾವತಿಸುವಲ್ಲಿ ಯಾವುದೇ ವಿವಾದವೂ ಇಲ್ಲ ಎಂದು ಹೈಕೋರ್ಟ್ ಹೇಳಿದೆ.

ಈ ವಿಷಯ ಸರಳವಾಗಿದೆ. ಕೆಲಸ ಪೂರ್ಣಗೊಂಡಿದೆ ಹಾಗೂ ಸಾಕಷ್ಟು ಸಮಯವೂ ಕಳೆದಿದೆ. ಅವರು ಈ ನ್ಯಾಯಾಲಯಕ್ಕೆ ಬಂದಿದ್ದಾರೆ. ಇನ್ನೂ ಹಣ ಪಾವತಿಗಾಗಿ ಕಾಯಬೇಕು ಎಂದು ತಿಳಿಸಲಾಗದು ಎಂದು ಹೈಕೋರ್ಟ್ ಹೇಳಿದೆ.

ನಕಲಿ ಬಿಲ್‌ಗಳ ಕೆಲ ಉದಾಹರಣೆಗಳಿವೆ ಎಂದು ಪಾಲಿಕೆ ಹೇಳಿದ್ದನ್ನು ತಳ್ಳಿ ಹಾಕಿದ ಹೈಕೋರ್ಟ್, ನೀವೇನಾದರೂ ಸಮಸ್ಯೆ ಬಗೆಹರಿಸುವುದಿದ್ದರೆ ಮೊದಲು ನಿಮ್ಮ ಕಡೆಯಿಂದ ಬಗೆಹರಿಸಿಕೊಳ್ಳಿ. ನಕಲಿ ಬಿಲ್‌ಗಳಿಗಾಗಿ ನಿಮ್ಮ ಎಷ್ಟು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಿ. ನ್ಯಾಯಾಲಯ ಆದೇಶ ಹೊರಡಿಸಿದ ನಂತರ ಆ ಬಗ್ಗೆ ವಿವೇಚನೆ ತೋರಬೇಕು ಎಂದು ಹೈಕೋರ್ಟ್ ತಿಳಿಸಿದೆ. ನಂತರ ಹೈಕೋರ್ಟ್ ನ್ಯಾಯಾಂಗ ನಿಂದನಾ ಅರ್ಜಿಯ ವಿಚಾರಣೆಯನ್ನು ಡಿಸೆಂಬರ್ 13ಕ್ಕೆ ಮುಂದೂಡಿದೆ.

## ವಿಶೇಷ ಶೀಘ್ರಪಥ ನ್ಯಾಯಾಲಯಗಳ ಅವಧಿ ವಿಸ್ತರಣೆ

ನವದೆಹಲಿ, ನ. 29 –ಲೈಂಗಿಕ ಪ್ರಕರಣಗಳ ಕುರಿತು ವಿಚಾರಣೆ ನಡೆಸುವ ವಿಶೇಷ ಶೀಘ್ರಪಥ ನ್ಯಾಯಾಲಯಗಳ ಅವಧಿಯನ್ನು ಇನ್ನೂ ಮೂರು ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ದೆಹಲಿಯ ನಿರ್ಭಯ ಪ್ರಕರಣದ ನಂತರ 1,023 ಶೀಘ್ರಪಥ ನ್ಯಾಯಾಲಯಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಇವುಗಳಲ್ಲಿ 389 ಕೇವಲ ಪೋಕ್ಸೋ ಪ್ರಕರಣಗಳ ವಿಚಾರಣೆ ನಡೆಸುತ್ತವೆ. ಈ ಯೋಜನೆಗೆ 2019ರಲ್ಲಿ ಒಂದು ವರ್ಷದವರೆಗೆ ಚಾಲನೆ ನೀಡಲಾಗಿತ್ತು. ನಂತರ ಅದನ್ನು ಎರಡು ವರ್ಷ ವಿಸ್ತರಿಸಲಾಗಿತ್ತು. ಉದ್ದೇಶಿತ 1,023 ನ್ಯಾಯಾಲಯಗಳ ಪೈಕಿ ಈಗ 754 ನ್ಯಾಯಾಲಯಗಳು ಸಕ್ರಿಯವಾಗಿವೆ.

# ಸಶಕ್ತ ಭಾಷೆಯಾಗಿ ಕನ್ನಡ ಬೆಳೆಯಬೇಕು

**(1ನೇ ಪುಟದಿಂದ)** ದುರಂತವೇ ಸರಿ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಕನ್ನಡ ನಾಡು, ನುಡಿಗೆ ಉಸಿರು ತುಂಬುವ ಕೆಲಸವನ್ನು ಕಳೆದ 108 ವರ್ಷಗಳಿಂದ ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ. ಜಿಲ್ಲಾಧ್ಯಕ್ಷನಾಗಿ ಕಳೆದ ಎರಡು ವರ್ಷಗಳಲ್ಲಿ ಸಾಹಿತ್ಯ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವುದಾಗಿ ತಿಳಿಸಿದರು.

ಇದೇ ವೇಳೆ ಈ ಬಾರಿಯ ಕರ್ನಾಟಕ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜಿಲ್ಲೆಯ ಶಿಲ್ಪಿ ಟಿ. ಶಿವಶಂಕರ್, ಶಿವಂಗಿ ಶಣ್ಮರಿ, ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘದ ಮುಖ್ಯಸ್ಥ ಸಿ.ಆರ್. ನಾಸೀರ್ ಅಹ್ಮದ್ ಅವರುಗಳನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗೌರವಿಸಲಾಯಿತು.

ಸಪ್ತಗಿರಿ ವಿದ್ಯಾಲಯದ ಮ್ಯಾನೇಜಿಂಗ್ ಟ್ರಸ್ಟಿ ಸಿ. ರಾಮಮೂರ್ತಿ, ಕಸಾಪ ಪದಾಧಿಕಾರಿಗಳಾದ ರೇವಣಸಿದ್ದಪ್ಪ ಅಂಗಡಿ, ಜಗದೀಶ್ ಕೂಲಂಬಿ, ಬಿ. ದಿಳ್ಳೆಪ್ಪ, ಜಿಗಳಿ ಪ್ರಕಾಶ್, ರುದ್ರಾಕ್ಷಿಬಾಯಿ, ಮಲ್ಲಮ್ಮ ನಾಗರಾಜ್, ಸತ್ಯಭಾಮ ಮಂಜುನಾಥ್ , ಪತ್ರಕರ್ತ ಬಾ.ಮ. ಬಸವರಾಜಯ್ಯ, ಭೈರೇಶ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಶಿವಶಂಕರ್, ನಾಗರಾಜ ಸಿರಿಗೆರೆ, ಕುಮುದ ಸುಶೀಲಪ್ಪ, ಬೇತೂರು ಮಾಳಿಗೇರ ಷಡಾಕ್ಷರಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಪರಿಮಳ ಜಗದೀಶ್ ಸೇರಿದಂತೆ ಅನೇಕ ಗಣ್ಯರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಬುಡಕಟ್ಟು ಜನರ ಜನ್‌ಮನ್ ಯೋಜನೆಗೆ ಸಂಪುಟದ ಸಮ್ಮತಿ

ನವದೆಹಲಿ, ನ. 29 – ಬುಡಕಟ್ಟು ಸಮುದಾಯದವರಿಗೆ 11 ರೀತಿಗಳಲ್ಲಿ ನೆರವಾಗುವ ಪಿಎಂ - ಜನ್‌ಮನ್ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ ಎಂಬ ಹೆಸರಿನ ಈ ಯೋಜನೆಗೆ 24,104 ಕೋಟಿ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿದೆ. ಈ ಪೈಕಿ ಕೇಂದ್ರದ ಪಾಲು 15,336 ಕೋಟಿ ರೂ. ಹಾಗೂ ರಾಜ್ಯಗಳ ಪಾಲು 8,768 ಕೋಟಿ ರೂ. ಆಗಿರಲಿದೆ.

18 ರಾಜ್ಯಗಳಲ್ಲಿನ 220 ಜಿಲ್ಲೆಗಳ 28.16 ಲಕ್ಷ ಜನರಿಗೆ ಈ ಯೋಜನೆಯ ಲಾಭ ಸಿಗಲಿದೆ. ವಸತಿ, ರಸ್ತೆ, ಸ್ವಚ್ಛ ಕುಡಿಯುವ ನೀರು, ವಿದ್ಯುತ್ ಇತ್ಯಾದಿ ಸೌಲಭ್ಯಗಳನ್ನು ಯೋಜನೆಯ ಮೂಲಕ ಕಲ್ಪಿಸಲಾಗುವುದು. ಜೀವನಾಧಾರ ಅವಕಾಶದ ನೆರವೂ ನೀಡಲಾಗುವುದು.

ಈ ಯೋಜನೆಯಡಿ 4.90 ಲಕ್ಷ ಪಕ್ಕಾ ಮನೆಗಳನ್ನು ನಿರ್ಮಿಸಲಾಗುವುದು. 8 ಸಾವಿರ ಕಿ.ಮೀ. ರಸ್ತೆ, 2,500 ಗ್ರಾಮಗಳಿಗೆ ಕುಡಿಯುವ ನೀರು, ಸಂಚಾರಿ ವೈದ್ಯಕೀಯ ಘಟಕಗಳು, 500 ಹಾಸ್ಟೆಲ್, 60 ಉದ್ಯೋಗ ತರಬೇತಿ ಕೇಂದ್ರಗಳ ಸ್ಥಾಪನೆ, 2,500 ಅಂಗನವಾಡಿಗಳ ನಿರ್ಮಾಣ, 57 ಸಾವಿರ ಮನೆಗಳಿಗೆ ವಿದ್ಯುತ್ ಸಂಪರ್ಕ ಹಾಗೂ ಗ್ರಾಮಗಳಲ್ಲಿ 3 ಸಾವಿರ ಮೊಬೈಲ್ ಸ್ಥಾವರ ನಿರ್ಮಾಣ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

## ಒಂಭತ್ತು ತಿಂಗಳಲ್ಲಿ ಬಹುತೇಕ ಪ್ರತಿದಿನ ಹವಾಮಾನ ವೈಪರೀತ್ಯ

ನವದೆಹಲಿ, ನ. 29 – ಈ ವರ್ಷ ಮೊದಲ ಒಂಭತ್ತು ತಿಂಗಳಲ್ಲಿ ಭಾರತ ಬಹುತೇಕ ಪ್ರತಿದಿನ ತೀವ್ರ ಹವಾಮಾನ ಪರಿಸ್ಥಿತಿ ಎದುರಿಸಿದೆ. ಈ ತೀವ್ರ ಪರಿಸ್ಥಿತಿಗಳಿಂದ 3 ಸಾವಿರದಷ್ಟು ಸಾವುಗಳು ಸಂಭವಿಸಿವೆ ಎಂದು ವರದಿಯೊಂದು ತಿಳಿಸಿದೆ.

ಈ ವರ್ಷ ಜನವರಿಯಿಂದ ಸೆಪ್ಟೆಂಬರ್ ಅವಧಿಯಲ್ಲಿ ಶೇ.86ರಷ್ಟು ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದ ಕೂಡಿತ್ತು ಎಂದು ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್ (ಸಿ.ಎಸ್.ಇ.) ವರದಿ ತಿಳಿಸಿದೆ.

ಈ ಹವಾಮಾನದಿಂದಾಗಿ 2,923 ಜನ ಸಾವನ್ನಪ್ಪಿದ್ದಾರೆ. 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. 80 ಸಾವಿರಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ ಹಾಗೂ 92 ಸಾವಿರ ಜಾನುವಾರುಗಳು ಸಾವನ್ನಪ್ಪಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮಧ್ಯಪ್ರದೇಶದಲ್ಲಿ ಅತಿ ಹೆಚ್ಚಿನ 138 ತೀವ್ರ ಹವಾಮಾನ ಘಟನೆಗಳು ಉಂಟಾಗಿವೆ. ಆದರೆ, ಬಿಹಾರದಲ್ಲಿ ಅತಿ ಹೆಚ್ಚಿನ 642 ಸಾವುಗಳು ಸಂಭವಿಸಿವೆ ಎಂದು ವರದಿ ತಿಳಿಸಿದೆ.

ದಕ್ಷಿಣ ಭಾರತದಲ್ಲಿ ಕೇರಳದಲ್ಲಿ ಅತಿ ಹೆಚ್ಚಿನ 67 ವೈಪರೀತ್ಯ ದಿನಗಳು ಕಂಡು ಬಂದಿವೆ ಹಾಗೂ 60 ಸಾವುಗಳು ಸಂಭವಿಸಿವೆ.

## ಭ್ರಷ್ಟಾಚಾರ ಪ್ರಕರಣಗಳಿಂದ ಪಾಕ್ ಪ್ರಧಾನಿ ಷರೀಫ್ ಮುಕ್ತ

ಇಸ್ಲಾಮಾಬಾದ್, ನ. 29 – 2018ರ ಭ್ರಷ್ಟಾ ಚಾರದ ಎರಡು ಪ್ರಕರಣಗಳಿಂದ ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ನವಾಜ್ ಷರೀಫ್ ಅವರು ದೋಷಮುಕ್ತರಾಗಿದ್ದಾರೆ. ಅವಿನ್ ಫೀಲ್ಡ್ ಆಸ್ತಿ ಹಾಗೂ ಅಲ್ - ಅಜಿಜಿಯಾ ಪ್ರಕರಣಗಳಲ್ಲಿ ಷರೀಫ್‌ಗೆ ಕೆಳ ನ್ಯಾಯಾಲಯದಲ್ಲಿ ಶಿಕ್ಷೆಯಾಗಿತ್ತು. ಆದರೆ, ಹೈಕೋರ್ಟ್ ಅವರನ್ನು ದೋಷಮುಕ್ತಗೊಳಿಸಿದೆ. ಮುಖ್ಯ ನ್ಯಾಯಮೂರ್ತಿ ಅಮೀರ್ ಫಾರೂಕ್ ಹಾಗೂ ನ್ಯಾಯಮೂರ್ತಿ ಮಿಯಾಂಗುಲ್ ಹಸನ್ ಔರಂಗಜೇಬ್ ಅವರನ್ನು ಒಳಗೊಂಡ ಪೀಠ ದೋಷಮುಕ್ತಗೊಳಿಸುವ ತೀರ್ಪು ನೀಡಿದೆ. 2018ರಲ್ಲಿ ಷರೀಫ್‌ಗೆ ಈ ಪ್ರಕರಣಗಳಲ್ಲಿ ಹತ್ತು ವರ್ಷ ಹಾಗೂ ಏಳು ವರ್ಷಗಳ ಜೈಲು ಶಿಕ್ಷೆಯಾಗಿತ್ತು.

# ಕಟ್ಟಡ ಕಾರ್ಮಿಕರಿಗೆ ವಿಶಿಷ್ಟ ಗುರುತು ಕಡ್ಡಾಯ

**(1ನೇ ಪುಟದಿಂದ)** ತೆರಳಿದರೂ ನೆರವು ಪಡೆಯಲು ಸಾಧ್ಯವಾಗಲಿದೆ. ಕಾರ್ಮಿಕರು ಇಂದು ದೆಹಲಿಯಲ್ಲಿದ್ದು, ನಾಳೆ ಮುಂಬೈಗೆ ತೆರಳಿದರೂ ಅವರ ಕುಟುಂಬಕ್ಕೆ ನೆರವು ಮುಂದುವರೆಯಲಿದೆ ಎಂದು ಕೇಂದ್ರ ಕಾರ್ಮಿಕ ಕಾರ್ಯದರ್ಶಿ ಆರತಿ ಅಹುಜಾ ತಿಳಿಸಿದ್ದಾರೆ. ಮುಂದಿನ ವಾರದಲ್ಲಿ ಈ ಬಗ್ಗೆ ಹೆಚ್ಚಿನ ಮಾಹಿತಿ ಬಿಡುಗಡೆ ಮಾಡಲಾಗುವುದು ಎಂದೂ ಅಹುಜಾ ಹೇಳಿದ್ದಾರೆ.

## ವರ್ಷ ವಿಸ್ತರಣೆ

**(1ನೇ ಪುಟದಿಂದ)** ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. 2020ರಲ್ಲಿ ಕೊರೊನಾ ಸಂದರ್ಭದಲ್ಲಿ ಬಡವರಿಗೆ ಪ್ರತಿ ತಿಂಗಳು 5 ಕೆ.ಜಿ. ಉಚಿತ ಆಹಾರ ಧಾನ್ಯ ನೀಡಲು ನಿರ್ಧರಿಸಲಾಗಿತ್ತು. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ನೀಡಲಾಗುವ 5 ಕೆಜಿ ಆಹಾರ ಧಾನ್ಯಕ್ಕೆ ಹೆಚ್ಚುವರಿಯಾಗಿ ಪಿ.ಎಂ.ಜಿ.ಕೆ.ಎ.ವೈ. ಯೋಜನೆಯಡಿ ಧಾನ್ಯ ನೀಡಲಾಗುತ್ತಿತ್ತು.

ಹಲವು ವಿಸ್ತರಣೆಗಳ ನಂತರ ಡಿಸೆಂಬರ್ 2022ರಂದು ಈ ಯೋಜನೆಗೆ ತೆರೆ ಎಳೆಯಲಾಗಿತ್ತು. ಆ ಸಂದರ್ಭದಲ್ಲಿ ಯೋಜನೆಯನ್ನು ಆಹಾರ ಭದ್ರತಾ ಕಾಯ್ದೆಯಡಿ ಸೇರ್ಪಡೆ ಮಾಡಲಾಗಿತ್ತು. ಆಹಾರ ಭದ್ರತಾ ಕಾಯ್ದೆಯಡಿ ಗ್ರಾಮೀಣ ಭಾಗದ ಶೇ.75 ಹಾಗೂ ನಗರ ಭಾಗದ ಶೇ.50ರಷ್ಟು ಜನರಿಗೆ ಅಂತ್ಯೋದಯ ಅನ್ನ ಯೋಜನೆ ಹಾಗೂ ಆದ್ಯತಾ ಕುಟುಂಬಗಳ ಹೆಸರಿನಲ್ಲಿ ಆಹಾರ ಧಾನ್ಯ ನೀಡಲಾಗುತ್ತದೆ.


**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 5ನೇ ಮೇನ್, #1978/3, ಶ್ರೀನಿಧಿ 30x50 ನಿವೇಶನದಲ್ಲಿ ನಿರ್ಮಿಸಿರುವ 1200 ಚ. ವಿಸ್ತೀರ್ಣ, 2 BHK ಮನೆ ಮಾರಾಟಕ್ಕಿದೆ.
ಶ್ರೀ ಡಿ. ವೆಂಕಟೇಶ್ ರಾವ್
95357 81770

**FOR RENT**
2BHK house in ground floor available for rent.
# 3683/1A, 7th cross, ward no 40, Anjneya badavane, near Nethravathi ladies hostel, Davanagere.
99728 00102
96113 50058

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**Site For Sale**
30x40 North West Corner, Behind SS Hi-Tech Hospital, Davangere.
96069 04902

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ.
87924 53686

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತಮುತ್ತಲಿನಲ್ಲಿ 08 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ.
ESI-PF ಸೌಲಭ್ಯವಿರುತ್ತದೆ.
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್, ದಾವಣಗೆರೆ.
9916929713, 9060545500
9739089022, 7411113888

**ಬೇಕಾಗಿದ್ದಾರೆ**
S.V. Sales Corporation, Davangere.
* ಅಂಗಡಿಯಲ್ಲಿ ಕೆಲಸ ಮಾಡುವವರು
* ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
* ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
6362023451, 9743437003

**ಪ್ರವೇಶ ಪ್ರಕಟಣೆ**
ಎಸ್.ಎಸ್. ಎಲ್.ಸಿ. ಪಿ.ಯು.ಸಿ, ಬಿ.ಎ., ಬಿ.ಕಾಂ., ಎಂ.ಬಿ.ಎ., ಎನ್.ಟಿ.ಸಿ.
ನರ್ಸರಿ ಟೀಚರ್ಸ್ ಟ್ರೈನಿಂಗ್
ಶ್ರೀ ಗಂಗೋತ್ರಿ ಡಿಸ್ಟೆನ್ಸ್ ಎಜುಕೇಶನ್,
ಗಾಂಧಿ ಸರ್ಕಲ್, ಮೋತಿ ಸ್ವೀಟ್ಸ್, ಟ್ರೆಂಡ್ಸ್ ಪಕ್ಕ, ದಾವಣಗೆರೆ.
86602 35013

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185, 95355 32369

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಮನೆ ಬಾಡಿಗೆಗೆ ಇದೆ**
2 ಬೆಡ್ ರೂಂ ಇರುವ First Floor ಮನೆ ಬಾಡಿಗೆಗೆ ಇದೆ.
#1382/A6 ಸರಸ್ವತಿ ನಗರ, ಬಿ ಬ್ಲಾಕ್, ಕೆಎಸ್‌ಎಸ್ ಸ್ಕೂಲ್ ಹತ್ತಿರ.
ಸಂಪರ್ಕಿಸಿ : ಧರ್ಮರಾಜ್
80956 76644

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**FOR SALE**
32.5x20.5 (3bhk) and 15.5x20.5 (Duplex) 2nd Main, 1st Cross, PJ Extension, Raithara Beedi, Davangere.
99165 95733
87479 44084

**ಪಾರ್ಟ್ ಟೈಂ ಜಾಬ್ಸ್**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
91487 33213


**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪಾಸ್ ಅಥವಾ ಫೇಲ್ ಆದ ಹಾಗೂ ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸದಲ್ಲಿ ಅನುಭವವಿರುವರಿಗೆ. ಸಂಬಳ 8,000 ರಿಂದ 9,000 ರೂ.ಗಳವರೆಗೆ.
ಅರುಣೋದಯ ಬಟ್ಟೆ ಅಂಗಡಿ
ಎವಿಕೆ ರಸ್ತೆ, ರೈತರ ಬೀದಿ, ರೇಣುಕಾ ಮಂದಿರ, ದಾವಣಗೆರೆ.
8152874447, 9482602688

**ಬೇಕಾಗಿದ್ದಾರೆ**
ಆಪ್ಟಿಕಲ್ ಶೋ ರೂಂನಲ್ಲಿ ಕಾರ್ಯ ನಿರ್ವಹಿಸಲು ಅನುಭವಿ ಸೇಲ್ಸ್‌ಮನ್‌ಗಳು ಮತ್ತು Opthometristಗಳು ಬೇಕಾಗಿದ್ದಾರೆ.
81970 72702

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬಾಡಿಗೆಗೆ ಇದೆ**
ಹೋಟೆಲ್ ಮಾಡಲು ತಳ್ಳುವ ಹೊಸ ಗಾಡಿ 8 ಡೋರ್, ಕೆಳಗೆ ಬಾಕ್ಸ್ ಬೈಕ್ ವ್ಹೀಲ್ ಇರುವ ಗಾಡಿ ಬಾಡಿಗೆಗೆ ಇದೆ.
ಮೊ : 96639 64854

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್ ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ
99004 38052, 97401 53513

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ - 3
2) ಆಪೇ ಆಟೋ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ - 1 ಅನುಭವವುಳ್ಳವರು
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**Need Computer Operater**
Near Ram & Co. Circle
Male Only
70221 58935

**ಮನೆಗಳು ಬಾಡಿಗೆಗೆ ಇವೆ**
ಮೊದಲ ಮಹಡಿಯಲ್ಲಿ ಎರಡು ಬೆಡ್ ರೂಂ ಮತ್ತು ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ, 24 ಗಂಟೆ ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವುಳ್ಳ ಮನೆಗಳು ಇವೆ.
ವಿಳಾಸ : ಡೋ. ನಂ. 1325/16, ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, ಕೆಎಸ್‌ಎಸ್ ಕಾಲೇಜು ಹತ್ತಿರ, ದಾವಣಗೆರೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ.)
87928 59141, 70198 75783

**ಲಿಂಗಾಯತ ವಧು ಬೇಕಾಗಿದೆ**
ಲಿಂಗಾಯತ ಸಾದರ 30 ವರ್ಷದ, ಡಾಕ್ಟರ್ MBBS, MD (Paediatrics) ಸುಂದರ ವರನಿಗೆ, ಸೂಕ್ತ ಡಾಕ್ಟರ್ ವಧು ಬೇಕಾಗಿದೆ.
98807 29108

**AVAILABLE FOR RENT**
Office / Commercial Space
Size : 20x45 Basement, Ground floor & First floor,
Address : Lawyer Road, K.B Extesnion, Davanagere.
Contact :
98442 61046, 87225 81400

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು.
ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ಕೆಲಸಕ್ಕೆ ಬೇಕಾಗಿದ್ದಾರೆ**
ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಅರ್ಹತೆ : Any Degree
ಸಂಪರ್ಕಿಸಿ :
63609 76841

**ಓಂ ಶ್ರೀ ಸಾಯಿ ತುಳಜಾಭವಾನಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೀನಿವಾಸ
No.1 ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ ಸಾಲಬಾಧೆ, ವ್ಯಾಪಾರ, ಶತ್ರುನಾಶ, ವಿಚ್ಛೇದನ, ಸ್ತ್ರೀ-ಪುರುಷ ವಶೀಕರಣ, ಸಂತಾನ ಹೀನತೆ, ಮಾಟ-ಮಂತ್ರ, ವಿದ್ಯೆಯಲ್ಲಿ ತೊಂದರೆ, ಆರೋಗ್ಯ ಸಮಸ್ಯೆ, ಲೈಂಗಿಕ ಸಮಸ್ಯೆ 3 ದಿನದಲ್ಲಿ ಶಾಶ್ವತ ಪರಿಹಾರ.
90365 82963

**ಲೋನ್ ಕೊಡಲಾಗುವುದು**
ಹೋಮ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಕಮರ್ಷಿಯಲ್ ಪ್ರಾಪರ್ಟಿ ಲೋನ್, (ಲೋನ್ take over), ಮನೆ ಕಟ್ಟಲು, ಅಗ್ರಿಕಲ್ಚರ್ ಲೋನ್ ಕೊಡಲಾಗುವುದು.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ. (ಕನೆಕ್ಟರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಕರೆ ಮಾಡಿ, ಷರತ್ತುಗಳು ಅನ್ವಯ)
74835 24662

**ಹುಡುಗರು ಬೇಕಾಗಿದ್ದಾರೆ**
ಕಲ್ಪತರು ಪ್ಲೈವುಡ್ಸ್ ಅಂಗಡಿಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
#6, 1ನೇ ಮೇನ್, ಎಸ್.ನಿಜಲಿಂಗಪ್ಪ ಬಡಾವಣೆ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ.
94498 11142, 94483 41142

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 15000 (ESI, PF, ಸೌಲಭ್ಯವಿರುತ್ತದೆ) ಸ್ಥಳ: ಮೈಸೂರು.
98450 10281

# ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಳ

## ದಾವಣಗೆರೆ ವಿ.ವಿ. ಕುಲಸಚಿವೆ ಬಿ.ಬಿ. ಸರೋಜ



ದಾವಣಗೆರೆ, ನ. 29 - ಕಳೆದ ನಾಲ್ಕು ದಶಕಗಳಲ್ಲಿ ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಪ್ರಮಾಣ ನಾಲ್ಕು ಪಟ್ಟು ಹೆಚ್ಚಾಗಿದೆ. ಶಿಕ್ಷಣದಲ್ಲಿ ಮಹಿಳೆಯರಿಗೆ ಈ ಹಿಂದಿನಂತಹ ಅಡ್ಡಿಗಳಿಲ್ಲ ಎಂದು ದಾವಣಗೆರೆ ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಕುಲಸಚಿವರಾದ ಬಿ.ಬಿ. ಸರೋಜ ತಿಳಿಸಿದರು.

ನಗರದ ಎಸ್.ಬಿ.ಸಿ. ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯೋತ್ಸವ ಹಾಗೂ ವಿದ್ಯಾರ್ಥಿ ಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಯಾಗಲು ಹಾಗೂ ಸ್ವತಂತ್ರರಾಗಲು ಈಗ ಹೆಚ್ಚು ಅವಕಾಶಗಳಿವೆ. ನಮ್ಮ ತಾಯಿ ಹಾಗೂ ಅಜ್ಜಿಯರ ಕಾಲದಲ್ಲಿ ಮಹಿಳೆಯರಿಗೆ ಇಷ್ಟೊಂದು ಅವಕಾಶಗಳು ಇರಲಿಲ್ಲ ಎಂದವರು ತಿಳಿಸಿದರು.

ಕೊರೊನಾ ನಂತರ ಶೈಕ್ಷಣಿಕ ವೇಳಾಪಟ್ಟಿ ಬದಲಾಗಿದೆ. ವೇಳಾಪಟ್ಟಿಯನ್ನು ಕೊರೊನಾಗೂ ಮೊದಲಿನ ಹಂತಕ್ಕೆ ತರಲು ಸರ್ಕಾರದ ಹಂತದಲ್ಲಿ ಪ್ರಯತ್ನಗಳು ನಡೆಯುತ್ತಿವೆ ಎಂದೂ ಅವರು ಹೇಳಿದರು. ಮಹಿಳೆಯರು ಶಿಕ್ಷಣ ಪಡೆಯುವದಷ್ಟೇ ಅಲ್ಲದೇ, ವಿವಿಧ ವಲಯಗಳಲ್ಲಿ ಗುರಿ ಸಾಧನೆಗಾಗಿ ಪಣ ತೊಡಬೇಕು. ಗಾಳಿಮಾತು ಹಾಗೂ ಅಸೂ ಯೆಯಂತಹ ಗುಣಗಳಿಂದ ದೂರವಿರಬೇಕು ಎಂದು ಸರೋಜ ಕಿವಿಮಾತು ಹೇಳಿದರು.

ಶಿಕ್ಷಣ ಹಾಗೂ ಆರ್ಥಿಕ ವಲಯಗಳಲ್ಲಿ ಅವಕಾಶ ಕಂಡುಕೊಂಡಿರುವ ಮಹಿಳೆಯರು, ಕುಟುಂಬದಿಂದ ಹಿಡಿದು ಸಮಾಜ ಹಾಗೂ ದೇಶದವರೆಗೆ ಎಲ್ಲ ವಲಯಗಳಲ್ಲಿ ಕೊಡುಗೆ ನೀಡುವ ಜವಾಬ್ದಾರಿಯನ್ನೂ ಹೊಂದಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಮಂಜಣ್ಣ, ಕನ್ನಡ ಬದುಕಿನ ಹಾಗೂ ಉದ್ಯೋಗದ ಭಾಷೆಯಾದಾಗ ಮಾತ್ರ ಉಳಿಯಲು ಸಾಧ್ಯ ಎಂದರು.

ಕನ್ನಡಕ್ಕಾಗಿ ಕೇವಲ ಬಾವುಟ ಹಿಡಿದರೆ ಸಾಲದು, ಕನ್ನಡ ಕೇವಲ ಕಂಠದಲ್ಲಿದ್ದರೆ ಸಾಲದು.

ಕನ್ನಡ ಕರುಳಿನ ಭಾಷೆಯಾಗಬೇಕು. ಕನ್ನಡ ಬೆಳೆಸಲು ನಿರಂತರ ಶ್ರಮಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಎಸ್.ಬಿ.ಸಿ. ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆ ಮೇಲೆ ಕಾಲೇಜಿನ ಟ್ರಸ್ಟಿಗಳಾದ ಕೆ.ಜಿ. ಸುಗಂಧರಾಜ್, ಎಸ್.ಕೆ. ವೀರಣ್ಣ, ಬಿ.ಎಸ್.ಸಿ. ಕಾಲೇಜಿನ ಪ್ರಾಂಶುಪಾಲ ಎಂ.ಸಿ. ಗುರು, ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಡಯಾನಾ ದಿವ್ಯ ಮತ್ತಿತರರು ಉಪಸ್ಥಿತರಿದ್ದರು.

ಶಾಂಭವಿ ಹಾಗೂ ಲಕ್ಷ್ಮಿ ಪ್ರಾರ್ಥಿಸಿದರೆ, ಗಾಯತ್ರಿ ಸ್ವಾಗತಿಸಿದರು. ಉಷಾ ನಿರೂಪಿಸಿದರೆ, ಶ್ವೇತ ವಂದಿಸಿದರು.

# ಪ್ರತಿ ಶಾಸಕರಿಗೆ ಐದು ಕೆಪಿಎಸ್ ಶಾಲೆ



## ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ

ರಾಣೇಬೆನ್ನೂರು, ನ. 29 - ಬರುವ ಶೈಕ್ಷಣಿಕ ವರ್ಷದಿಂದ ರಾಜ್ಯದ ಪ್ರತಿ ಶಾಸಕರಿಗೂ 5 ಕೆಪಿಎಸ್ ಶಾಲೆಗಳನ್ನು ಕೊಡುವದರೊಂದಿಗೆ ಶೈಕ್ಷಣಿಕ ಕ್ರಾಂತಿ ಆಗಲಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ಅವರು ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿ ಗ್ರಾಮದಲ್ಲಿ ಹಳೆ ವಿದ್ಯಾರ್ಥಿಗಳು ನಿರ್ಮಿಸಿದ ನೂತನ ಶಾಲಾ ಕಟ್ಟಡವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಮಾತನಾಡುತ್ತಿದ್ದರು.

ಸಮಸ್ಯೆಗಳೇ ಅಧಿಕವಾಗಿರುವ ನನ್ನ ಇಲಾಖೆಯಲ್ಲಿ ಹಂತ-ಹಂತವಾಗಿ ಅವುಗಳಿಗೆ ಪರಿಹಾರ ಒದಗಿಸಲು ನಮ್ಮ ಸರ್ಕಾರ ಕಾರ್ಯೋನ್ಮುಖವಾಗಿದ್ದು ಆ ದಿಶೆಯಲ್ಲಿ ನೇಮಕಾತಿ ಮಾಡಿದ್ದೇವೆ. ಇನ್ನೂ ಮಾಡುತ್ತೇವೆ ಎಂದು ಸಚಿವ ಮಧು ಬಂಗಾರಪ್ಪ ವಿವರಿಸಿ, ಸರ್ಕಾರಿ ಶಾಲೆಗೆ ಮಕ್ಕಳು ಧಾವಿಸಿ ಬರುವಂತೆ ಸರ್ಕಾರ ಕಾರ್ಯಕ್ರಮಗಳನ್ನ ಹಾಕುವುದಾಗಿ ಸಚಿವರು ತಿಳಿಸಿದರು.

ಹಿಂದೆ ಬಂಗಾರಪ್ಪ ಮುಖ್ಯಮಂತ್ರಿಗಳಾದಾಗ ರೈತಪರ ಚಿಂತನೆಯೊಂದಿಗೆ ನೀರಾವರಿ ಹಾಗೂ ಪ್ರತಿ ಮಕ್ಕಳಿಗೂ ಒಂದು ರೂಪಾಯಿ ನೀಡುವ ಯೋಜನೆ ಹೊಂದಿವ ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಿಸುವ ಪ್ರಯತ್ನ ಮಾಡಿದ್ದರು. ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಹೆಚ್ಚು ಆದ್ಯತೆ ನೀಡುತ್ತದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಕಾಗಿನೆಲೆ ಸಮಾರಂಭ ಮುಗಿಸಿ ಕದರಮಂಡಲಗಿ ಗ್ರಾಮಕ್ಕೆ ಆಗಮಿಸಿ ಶಾಲಾಕಟ್ಟಡ ಉದ್ಘಾಟಿಸಿ ಮುಖ್ಯಮಂತ್ರಿ ಸಿದ್ರಾಮಯ್ಯ ತೆರಳಿದ ನಂತರ ನಡೆದ ಸಮಾರಂಭದ ಅಧ್ಯಕ್ಷತೆಯನ್ನ ಶಾಸಕ ಬಸವರಾಜ ಶಿವಣ್ಣನವರ ವಹಿಸಿದ್ದರು. ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಮಾಜಿ ಶಾಸಕ ಸುರೇಶಗೌಡ ಪಾಟೀಲ ಮತ್ತಿತರರಿದ್ದರು.

ಕರ್ನಾಟಕದ ತಿರುಪತಿ ಎಂದು ಪ್ರಸಿದ್ದಿ ಪಡೆದ ಕದರಮಂಡಲಗಿ ಗ್ರಾಮದಲ್ಲಿ ಶಾಲೆಯ ಹಳೆ ವಿದ್ಯಾರ್ಥಿಗಳು 1ಕೋಟಿ 40 ಲಕ್ಷ ವೆಚ್ಚದಲ್ಲಿ ಎರಡು ಅಂತಸ್ತಿನ ಸರ್ಕಾರಿ ಕನ್ನಡ ಶಾಲೆಯ ಕಟ್ಟಡವನ್ನುಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

# ತೌಡೂರು ಗ್ರಾಮೀಣ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ವಿಜಯ್ ಕುಮಾರ್



ಹರಪನಹಳ್ಳಿ, ನ. 29 - ತಾಲ್ಲೂಕಿನ ತೌಡೂರು ಪ್ರಾಥಮಿಕ ಗ್ರಾಮೀಣ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ, ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ್ದು ಅವಿರೋಧವಾಗಿ ಅಧ್ಯಕ್ಷರಾಗಿ ಎಂ. ವಿಜಯ್ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಕೆ. ಎಂ. ಮಂಜುನಾಥಯ್ಯ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಬಸವರಾಜ್ ಕೆ. ಎನ್. ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ವೈ.ಡಿ. ಅಣ್ಣಪ್ಪ, ಮುಖಂಡರುಗಳಾದ ಯರಬಳ್ಳಿ ಉಮಾಪತಿ, ಡಿ. ಸಿದ್ದಪ್ಪ, ಬಾಲೇನಹಳ್ಳಿ ಕೆಂಚನಗೌಡ, ರಾಮನಗೌಡ, ಕಾವಲಹಳ್ಳಿ ರವೀಂದ್ರನಾಥ್, ಜನಾರ್ಧನ್, ತೌಡೂರು ಕೆಂಚಪ್ಪ, ನಿವೃತ್ತ ಶಿಕ್ಷಕ ಚನ್ನಬಸಪ್ಪ, ಜಾತಪ್ಪ, ಹನುಮಂತಪ್ಪ, ಮನೋಹರ್, ರಾಜಾನಾಯ್ಕ್, ಪುಟ್ಟಪ್ಪ, ನಿರ್ದೇಶಕರುಗಳಾದ ಶಿವಯೋಗಿ, ಕೊಟ್ರಗೌಡ, ಕೆ. ಭರಮಪ್ಪ, ಪರುಸಪ್ಪ, ಗಣೇಶ್, ಶೇಖರ್ ನಾಯ್ಕ್, ದೊಡ್ಡ ಸಿದ್ದಪ್ಪ, ಮಲ್ಲಮ್ಮ, ಪುತ್ರಮ್ಮ, ಕಾಮಪ್ಪ, ಪ್ರಭಾರಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ. ಉಮೇಶ್, ಗುಮಾಸ್ತ ಹೆಚ್. ಮಲ್ಲೇಶ್, ಹಾಗೂ ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಚಿಂತನೆ- ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 6 ರಿಂದ 7 ರವರೆಗೆ ಟ್ರಸ್ಟ್ ಕಚೇರಿ ಸಭಾಂಗಣದಲ್ಲಿ ಚಿಂತನೆ ಮತ್ತು ಸಂವಾದ ನಡೆಯಲಿದೆ. 'ಜಿದ್ದು ಕೃಷ್ಣಮೂರ್ತಿಯವರ ಜೀವನಾನಂದದ ಸೂತ್ರಗಳು' ಕುರಿತು ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ ವಿಷಯ ಮಂಡಿಸಲಿದ್ದಾರೆ. ಪ್ರೊ.ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್, ಆವರಗೆರೆ ರುದ್ರಮುನಿ, ಕಲೀಂ ಬಾಷಾ ಮತ್ತಿತರರು ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ಕನಕ ಜಯಂತಿ, ಕಂಚಿನ ಪುತ್ಥಳಿ ಮೆರವಣಿಗೆ

ದಾವಣಗೆರೆ, ನ. 29 - ನಾಳೆ ದಿನಾಂಕ 30ರ ಗುರುವಾರ ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಕನಕ ಜಯಂತ್ಯುತ್ಸವ ಕಾರ್ಯಕ್ರಮ ಹಾಗೂ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕನಕ ಜಯಂತಿಯನ್ನು ಜಿಲ್ಲಾಡಳಿತ, ಜಿಲ್ಲಾ ಪಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಕನಕದಾಸರು ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಿಲ್ಲಾ ಹೋರಾಟ ಸಮಿತಿ ಸೇರಿದಂತೆ ವಿವಿಧ ಸಂಘ-ಸಮಿತಿಗಳ ಸಂಯುಕ್ತಾಶ್ರಯದಲ್ಲಿ ಆಯೋಜನೆ ಮಾಡಲಾಗಿದೆ ಎಂದರು.

ನ. 30 ರಂದು ಬೆಳಿಗ್ಗೆ 10 ಕ್ಕೆ ಕನಕದಾಸರ ಕಂಚಿನ ಪುತ್ಥಳಿಯೊಂದಿಗೆ ವಿವಿಧ ಜಾನಪದ ಕಲಾ ತಂಡಗಳೊಟ್ಟಿಗೆ ಮೆರವಣಿಗೆ ನಡೆಯಲಿದ್ದು, ಹಗೇದಿಬ್ಬ ವೃತ್ತದಿಂದ ಆರಂಭವಾಗಿ, ಬಿ.ಎಸ್. ಚನ್ನಬಸಪ್ಪ ಬಟ್ಟೆ ಅಂಗಡಿ ರಸ್ತೆ, ದೊಡ್ಡಪೇಟೆ, ಹೊಂಡದ ವೃತ್ತ, ಅರುಣಾ ಟಾಕೀಸ್ ಮಾರ್ಗವಾಗಿ ಶ್ರೀ ಬೀರಲಿಂಗೇಶ್ವರ ಆವರಣ ತಲುಪಲಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮೆರವಣಿಗೆಗೆ ಚಾಲನೆ ನೀಡಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ. ನಂತರ ಮಧ್ಯಾಹ್ನ 12 ಕ್ಕೆ ನಗರದ ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕನಕ ಜಯಂತಿ ಕಾರ್ಯಕ್ರಮ ನಡೆಯಲಿದೆ. ಸಚಿವ ಶಾಮನೂರು ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಹೋರಾಟ ಸಮಿತಿ ಅಧ್ಯಕ್ಷ ಟಿ.ಜೆ. ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಸಮಾಜದ ಗುರುಗಳಾದ ಶಿವಕುಮಾರ್ ಒಡೆಯರ್, ಮಾಜಿ ಶಾಸಕ ಎಸ್. ರಾಮಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಮಾಜಿ ಮಹಾಪೌರ ಹೆಚ್.ಬಿ. ಗೋಣೆಪ್ಪ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹೆಚ್.ಜಿ. ಸಂಗಪ್ಪ, ಹೆಚ್.ಬಿ. ಗೋಣೆಪ್ಪ, ಜಿ.ಸಿ. ನಿಂಗಪ್ಪ, ಜಿ.ಡಿ. ಪ್ರಕಾಶ್, ಲೋಹಿತ್ ಯರಗಲ್, ಬಿ. ರಮೇಶ್, ಜಮ್ನಳ್ಳಿ ನಾಗರಾಜ್, ಎಸ್.ಎಸ್. ಗಿರೀಶ್, ಅಡಾಣಿ ಸಿದ್ಧಪ್ಪ, ಕರಿಬಸಪ್ಪ ಕಸವಾಳ್ ಮತ್ತಿತರರು ಉಪಸ್ಥಿತರಿದ್ದರು.

# ಮುಂದುವರೆದ ಅತಿಥಿ ಉಪನ್ಯಾಸಕರ ಮುಷ್ಕರ



ದಾವಣಗೆರೆ, ನ. 29 - ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಅತಿಥಿ ಉಪನ್ಯಾಸಕರು ಸರ್ಕಾರದ ಗಮನ ಸೆಳೆಯಲು ಕಣ್ಣಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಸೇವಾ ಖಾಯಮ್ಮಾತಿಗಾಗಿ ತರಗತಿಗಳನ್ನು ಬಹಿಷ್ಕರಿಸಿದರು. ಅನಿರ್ದಿಷ್ಟಾವಧಿ ಮುಷ್ಕರ 5ನೇ ದಿನವೂ ಮುಂದುವರಿದಿದೆ.

# ಪ್ರಭಾ ಎಸ್ಸೆಸ್ಸ್‌ರಿಂದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ



ದಾವಣಗೆರೆ, ನ. 29 - ದಾವಣಗೆರೆ ಇಲೆವೆನ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಂಘ ಇವರ ಜಂಟಿ ಆಶ್ರಯದಲ್ಲಿ ಸ್ಥಳೀಯ ಜಿಲ್ಲಾ ಕ್ರೀಡಾಂಗಣದಲ್ಲಿ ಆರಂಭಗೊಂಡಿರುವ ಶಾಮನೂರು ಡೈಮಂಡ್ ಶಿವಗಂಗಾ ಕಪ್ 2023 2ನೇ ದಿನದ ಆಟದಲ್ಲಿ ಎಸ್. ಎಸ್. ಕೇರ್ ಟ್ರಸ್ಟ್‌ನ ಟ್ರಸ್ಟಿ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸಕಲೇಶಪುರ ಮತ್ತು ಕರ್ವೂರು ಕ್ರಿಕೆಟ್ ತಂಡಗಳ ನಡುವೆ ಟಾಸ್ ಮಾಡಿ, ಬ್ಯಾಟ್ ಮಾಡುವ ಮುಖಾಂತರ ಪಂದ್ಯಾವಳಿಯನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಶಿವಗಂಗಾ ಶ್ರೀನಿವಾಸ್, ರಾಜುರೆಡ್ಡಿ, ಕಿರಣ್, ಜಯಪ್ರಕಾಶ್ ಗೌಡ, ಅನಿತಾಬಾಯಿ ಮಾಲತೇಶ್ ಜಾಧವ್, ಲತಿಕಾ ದಿನೇಶ್ ಶೆಟ್ಟಿ, ರಾಜೇಶ್ವರಿ, ಶುಭಮಂಗಳ, ಕವಿತಾ ಚಂದ್ರಶೇಖರ್, ದಾಕ್ಷಾಯಣಮ್ಮ, ಉಮಾ ಕುಮಾರ್ ಇನ್ನು ಮುಂತಾದವರಿದ್ದರು.

# ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ದಾವಣಗೆರೆ, ನ. 29- ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ವೇದಿಕೆ ವತಿಯಿಂದ ನಾಳೆ ದಿನಾಂಕ 30 ರಂದು ಬೆಳಿಗ್ಗೆ 11.30 ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ರಾಜ್ಯ ಕಾರ್ಯಾಧ್ಯಕ್ಷರಾದ ಸುವರ್ಣಮ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗೆರೆ, ಮಹಾವೀರ ಮ. ಕರೆಣ್ಣವರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ಕಾನೂನು ಸಲಹೆಗಾರರಾದ ಉಮಾ ನಾಗಕುಮಾರ ಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

ಕನ್ನಡ ರಾಜ್ಯೋತ್ಸವದ ಅಂಗವಾಗಿ ನ. 30 ರಂದು ಬೆಳಿಗ್ಗೆ 8 ಕ್ಕೆ ನಿಟುವಳ್ಳಿ ಹೊಸಬಡಾವಣೆಯ 60 ಅಡಿ ರಿಂಗ್ ರಸ್ತೆಯಿಂದ ಕುವೆಂಪು ಕನ್ನಡ ಭವನದವರೆಗೆ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ.

ವಿಶೇಷ ಆಹ್ವಾನಿತರಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಮೇಯರ್ ವಿನಾಯಕ ಪೈಲ್ವಾನ್, ಎಸ್ಪಿ ಉಮಾ ಪ್ರಶಾಂತ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಪದಾಧಿಕಾರಿಗಳಾದ ಬಿ. ಜಯಪ್ರಕಾಶ್, ನೀತಾ ನಂದೀಶ್, ರವಿಕುಮಾರ್, ಪಿ.ಕೆ. ಮಂಜುನಾಥ್, ಅಕ್ಬರ್ ಬಾಷಾ, ನಿಂಗರಾಜ್ ಜಾಧವ್, ಮಲ್ಲಿಕಾರ್ಜುನ, ದೇವೇಂದ್ರಪ್ಪ ಇದ್ದರು.

# ನಗರದಲ್ಲಿಂದು ಕಾಂಗ್ರೆಸ್‌ನಿಂದ ಕನಕದಾಸ ಜಯಂತೋತ್ಸವ

ಜಿಲ್ಲಾ ಕಾಂಗ್ರೆಸ್ ನಿಂದ ಇಂದು ಬೆಳಗ್ಗೆ 12 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಕನಕದಾಸ ಜಯಂತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

# ನಗದು ಹಣ ಕಿತ್ತುಕೊಂಡು ಪರಾರಿ

ದಾವಣಗೆರೆ, ನ. 29 - ಭಾನುವಾರ ರಾತ್ರಿ 10.30ರ ವೇಳೆಯಲ್ಲಿ ನಗರದ ಗ್ಲಾಸ್ ಹೌಸ್ ಪಕ್ಕದ ಲೇ ಔಟ್‌ನಲ್ಲಿ ಬೈಕ್ ನಿಲ್ಲಿಸಿಕೊಂಡು ಮೊಬೈಲ್ ನೋಡುತ್ತಿದ್ದಾಗ ಇಬ್ಬರು ವ್ಯಕ್ತಿಗಳು 2 ಮೊಬೈಲ್ ಹಾಗೂ ಜೇಬಿನಲ್ಲಿದ್ದ 7 ಸಾವಿರ ರೂ.ಗಳನ್ನು ಕಿತ್ತುಕೊಂಡು ಹೋಗಿದ್ದಾರೆ ಎಂದು ಗೌಸ್ ಪೀರ್ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ನಾಳೆ ಬಾಯಿರೋಗ ವಿಚಾರ ಸಂಕಿರಣ

ದಾವಣಗೆರೆ, ನ.28- ಬಾಪೂಜಿ ದಂತ ವೈದ್ಯಕೀಯ ಕಾಲೇಜು ಮತ್ತು ಕಾಲೇಜ್ ಆಫ್ ಡೆಂಟಲ್ ಸೈನ್ಸೆಸ್ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ 1 ರಿಂದ 3 ರ ವರೆಗೆ 34 ನೇ ರಾಷ್ಟ್ರ ಮಟ್ಟದ ಬಾಯಿರೋಗ ವೈದ್ಯಕೀಯ ಹಾಗೂ ಕ್ಷ ಕಿರಣ ವಿಭಾಗದ ವಿಚಾರ ಸಂಕಿರಣ ನಡೆಯಲಿದೆ ಎಂದು ಡೆಂಟಲ್ ಕಾಲೇಜಿನ ಪ್ರಾಂಶುಪಾಲ ಡಾ. ಐ.ಎಂ. ಅಲಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಪ್ರಪ್ರಥಮ ಬಾರಿಗೆ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಡಿ. 2 ರ ಶನಿವಾರ ಬೆಳಗ್ಗೆ 11 ಕ್ಕೆ ಬಾಪೂಜಿ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮ ದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಕೆ. ಸಿದ್ದಪ್ಪ ಉದ್ಘಾಟಿಸುವರು. ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಇತರರು ಭಾಗವಹಿಸುವರು.

ಮೂರು ದಿನಗಳ ವಿಚಾರ ಸಂಕಿರಣದಲ್ಲಿ 800ಕ್ಕೂ ಹೆಚ್ಚು ದಂತ ವೈದ್ಯರು ಭಾಗವಹಿಸಿ, 550ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧ ಮಂಡಿಸುವರು ಎಂದು ತಿಳಿಸಿದರು.

ಡಾ. ಎಲ್. ಅಶೋಕ್, ಡಾ. ಮಮತಾ, ಡಾ. ಶಂಭುಲಿಂಗಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಮಹಿಳಾ ಸಂಘಗಳಿಗೆ 15 ಸಾವಿರ ಡ್ರೋನ್

ನವದೆಹಲಿ, ನ. 29 – ಪ್ರಗತಿಪರ ಮಹಿಳಾ ಸ್ವಸಹಾಯ ಗುಂಪುಗಳಿಗೆ 15,000 ಡ್ರೋನ್‌ಗಳನ್ನು ಒದಗಿಸುವ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. 2024-25ರ ನಂತರದ ಎರಡು ವರ್ಷಗಳಲ್ಲಿ 1,261 ಕೋಟಿ ರೂ. ವೆಚ್ಚದಲ್ಲಿ ಡ್ರೋನ್ ಒದಗಿಸಲಾಗುವುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಹಿಳಾ ಸಂಘಗಳು ಈ ಡ್ರೋನ್‌ಗಳನ್ನು ಬಾಡಿಗೆ ಮೇಲೆ ರೈತರಿಗೆ ನೀಡಲಿವೆ.

ದೀನ್ ದಯಾಳ್ ಅಂತ್ಯೋದಯ ಯೋಜನೆಯಡಿ ಬರುವ 89 ಲಕ್ಷ ಸ್ವಸಹಾಯ ಸಂಘಗಳ ಪೈಕಿ ಈ ಮಹಿಳಾ ಸಂಘಗಳನ್ನು ಗುರುತಿಸಲಾಗುವುದು.

ಡ್ರೋನ್‌ಗೆ ತಗಲುವ ವೆಚ್ಚದ ಶೇ.80ರಷ್ಟನ್ನು ಕೇಂದ್ರ ಸರ್ಕಾರ ಭರಿಸಲಿದೆ. ಡ್ರೋನ್ ಹಾಗೂ ಇತರೆ ಬಿಡಿ ಭಾಗಗಳಿಗೆ 8 ಲಕ್ಷ ರೂ.ಗಳವರೆಗೆ ಸ್ವಸಹಾಯ ಸಂಘಗಳಿಗೆ ನೆರವು ನೀಡಲಾಗುವುದು. 500 ಡ್ರೋನ್‌ಗಳನ್ನು ರಸಗೊಬ್ಬರ ಕಂಪನಿಗಳಿಗೆ ನೀಡಲಾಗುವುದು. ಉಳಿದ 14,500 ಡ್ರೋನ್‌ಗಳನ್ನು ಕೇಂದ್ರ ಸಹಾಯದ ಮೂಲಕ ಮುಂದಿನ ಎರಡು ವರ್ಷಗಳಲ್ಲಿ ಒದಗಿಸಲಾಗುವುದು. ಡ್ರೋನ್ ಪೈಲಟ್‌ಗೆ 15 ಸಾವಿರ ರೂ. ಹಾಗೂ ಸಹ ಪೈಲಟ್‌ಗೆ 10 ಸಾವಿರ ರೂ.ಗಳ ಗೌರವ ಧನ ಸಹ ನೀಡಲಾಗುವುದು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ರೇವಣಸಿದ್ದಪ್ಪ ಬಿನ್ ಕರಿಬಸಪ್ಪ (ಮೊಬೈಲ್ ನಂ.6360611661. 9008250843) ದೊಡ್ಡಬಾತಿ ದಾವಣಗೆರೆ ತಾಲ್ಲೂಕು ಇವರು ದೊಡ್ಡಬಾತಿ ಗ್ರಾಮದ ವಾಸಿಗಳಾದ ಬಿ.ಜಿ. ಮಂಜುನಾಥ್ ಬಿನ್ ಬಿ.ಜಿ. ರೇವಣಸಿದ್ದಪ್ಪ (ಮೊ. 8747581530) ಇವರಿಂದ ದೊಡ್ಡಬಾತಿ ಗ್ರಾಮದ ಸರಹದ್ದಿಗೆ ಸೇರಿದ ರೇವಣಸಿದ್ದೇಶ್ವರ ದೇವಸ್ಥಾನದ ಹತ್ತಿರ ಇರುವ ಪಂಚಾಯಿತಿ ನಂ. 60/2 ಇ-ಸ್ವತ್ತು ನಂ. 151200201400101892 ಅಳತೆ 28x100 ಅಡಿ ಉಳ್ಳ ಖಾಲಿ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅಥವಾ ತಂಟೆ-ತಕರಾರು ಇದ್ದಲ್ಲಿ ತಮ್ಮ ತಕರಾರನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು. 7 ದಿನಗಳು ಮುಗಿದ ನಂತರ ಬಂದ ತಕಾರಾರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ತಿಳಿಯಿರಿ.

**ಕೆ.ಬಿ. ಶೈಲಾಶ್ರೀ**
**ವಕೀಲರು, #1963/1,2**
**SS ಲೇಔಟ್, ಎ ಬ್ಲಾಕ್,**
**ಒಳಾಂಗಣ ಕ್ರೀಡಾಂಗಣ ಹತ್ತಿರ,**
**ದಾವಣಗೆರೆ.**
**ಮೊ. : 9448658502**

**ಸಹಿ/- ಕೆ.ಬಿ. ಶೈಲಾಶ್ರೀ**
**ಬಿ.ಎಸ್ಸಿ ಎಲ್.ಎಲ್.ಬಿ., ಪಿಜಿಡಿಎಂ**
**ವಕೀಲರು KAR-70/98**

## ಸಾರ್ವಜನಿಕ ಪ್ರಕಟಣೆ

ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತು ಹಾಲಿ ದಾವಣಗೆರೆ ಸಿಟಿ, ನಿಟ್ಟುವಳ್ಳಿ ಹೊಸ ಬಡಾವಣೆ, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ ವಾಸಿಯಾದ ಡಾ. ಗಣೇಶ ಉಡುಪ ಬಿನ್ ಆನಂದರಾಮ ಉಡುಪ ಇವರು ದಿನಾಂಕ 10.05.2003ರಂದು ಎಸ್.ಆರ್. ನಂ. 1295/2003-04ರಂತೆ **ಶ್ರೀ ಪಿ.ಬಿ. ವಿನಾಯಕ ಬಿನ್ ಎ.ಎನ್. ಹನುಮಂತಪ್ಪ** ಇವರಿಂದ ಶುದ್ಧ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಕಾನೂನು ಬದ್ಧ ಮಾಲೀಕರಾಗಿರುತ್ತಾರೆ ಎಂದು ದಾಖಲೆಗಳನ್ನು ನೀಡಿರುತ್ತಾರೆ. ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಡಾ. ಗಣೇಶ ಉಡುಪ ಬಿನ್ ಆನಂದರಾಮ ಉಡುಪ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪ್ಪಟಂತೆ ಬೇರೆ ಯಾರೇ ವಾರಸುದಾರರಾಗಲೀ ಅಥವಾ ಬೇರೆ ಯಾವುದೇ ವ್ಯಕ್ತಿಯ ತಂಟೆ, ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆಗೆ, ಕ್ರಯದ ಕರಾರಿಗೆ ಒಳಪಟ್ಟಿದ್ದಲ್ಲಿ ಹಾಗೂ ಯಾವುದೇ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳೊಂದಿಗೆ ವ್ಯವಹರಿಸಿದ್ದಲ್ಲಿ ಅಥವಾ ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ಏಳು ದಿನಗಳ ಒಳಗಾಗಿ ನನ್ನ ಕಕ್ಷಿದಾರರನ್ನಾಗಲೀ ಅಥವಾ ಕೆಳಕಂಡ ಅವರ ವಕೀಲರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಒಂದು ವೇಳೆ ಏಳು ದಿನಗಳ ಒಳಗಾಗಿ ಯಾವುದೇ ರೀತಿಯ ತಂಟೆ, ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತು ಬೇರೆ ಯಾವುದೇ ವ್ಯಕ್ತಿಗಳ ಹಕ್ಕು ಹಿತಾಸಕ್ತಿಗೆ ಒಳಪಟ್ಟಿರುವುದಿಲ್ಲ ಎಂದು ಪರಿಗಣಿಸಿ ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಆನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಆವರಗೆರೆ ಗ್ರಾಮದ ವಾಸೋಪಯೋಗಕ್ಕಾಗಿ ಭೂ ಪರಿವರ್ತನೆಗೊಂಡಿರುವ ಸ.ನಂ.232/1ಸಿ5 ರಲ್ಲಿ ಅಂತಿಮ ಏಕನಿವೇಶನ ಅನುಮೋದನೆಗೊಂಡಿರುವ ಚಾಲ್ತಿ ಮಹಾನಗರ ಪಾಲಿಕೆ ಡೋರ್ ನಂ. 419/1, ವಿಸ್ತೀರ್ಣ 155'+183'/2 × 90'+106'/2 ಖಾಲಿ ನಿವೇಶನಕ್ಕೆ **ಚಕ್ಕುಬಂದಿ : ಪೂರ್ವಕ್ಕೆ** : 30 ಅಡಿಯುಳ್ಳ ರಸ್ತೆ, **ಪಶ್ಚಿಮಕ್ಕೆ** : 30 ಅಡಿಯುಳ್ಳ ರಸ್ತೆ, **ಉತ್ತರಕ್ಕೆ** : ರಿ.ಸ. ನಂ. 232/1ಸಿ4ರ ಸ್ವತ್ತು. **ದಕ್ಷಿಣಕ್ಕೆ** : 40 ಅಡಿಯುಳ್ಳ ರಸ್ತೆ.

**ಆರ್.ಟಿ. ವಿನಯಕುಮಾರ್**
ವಕೀಲರು, #82/18, ಪಿ.ಬಿ.ರಸ್ತೆ, ಅರುಣಾ ಟಾಕೀಸ್ ಹತ್ತಿರ, ದಾವಣಗೆರೆ. **ಮೊ : 98445 97838**


# ಯಾವುದೇ ಸ್ಪರ್ಧೆಗಳಿರಲಿ ಪ್ರಾಮಾಣಿಕ ತೀರ್ಪು ಮುಖ್ಯ



ದಾವಣಗೆರೆ, ನ. 29- ಯಾವುದೇ ಸ್ಪರ್ಧೆಗಳಿರಲಿ ತೀರ್ಪುಗಾರರ ಪ್ರಾಮಾಣಿಕ ತೀರ್ಪು ಮುಖ್ಯವಾಗುತ್ತದೆ. ನಿಷ್ಪಕ್ಷಪಾತವಾದ ತೀರ್ಪು ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಪಿಯು ಉಪನಿರ್ದೇಶಕ ಎಸ್.ಜಿ. ಕರಿಸಿದ್ಧಪ್ಪ ಹೇಳಿದರು.

ನಗರದ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆಗಳ ಸ್ಪರ್ಧಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಒಬ್ಬ ವ್ಯಕ್ತಿಗೆ ಈ ಸ್ಪರ್ಧೆ ಸೀಮಿತವಾಗಿಲ್ಲ. ಇದು 152 ಕಾಲೇಜುಗಳಿಗೆ ಸಂಬಂಧಿಸಿದ ಕಾರ್ಯಕ್ರಮವಾಗಿದೆ. ತೀರ್ಪುಗಾರರು ತಮ್ಮ ಪ್ರಾಮಾಣಿಕತನವನ್ನು ಉಳಿಸಿಕೊಂಡು ತೀರ್ಪು ನೀಡಬೇಕೆಂದರು.

ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ಎಸ್. ಪ್ರದೀಪ್ ಮಾತನಾಡಿ, ಸ್ಪರ್ಧೆಯಲ್ಲಿ ಸೋಲು-ಗೆಲುವು ಸಹಜ. ಗೆದ್ದವರು ಹಿಗ್ಗದೇ, ಸೋತವರು ಕುಗ್ಗದೇ ಸಕ್ರಿಯವಾಗಿ ಪಾಲ್ಗೊಂಡು, ಸ್ಪರ್ಧಾ ಮನೋಭಾವನೆಯಿಂದ ಭಾಗವಹಿಸುವ ಮೂಲಕ ಜಯಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಲಿ ಎಂದು ಆಶಿಸಿದರು.

ಸಂತೇಬೆನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎ.ಟಿ ರಂಗಪ್ಪ, ದಾವಣಗೆರೆ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪಂಚಾಕ್ಷರಪ್ಪ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಆರ್. ಸುರೇಶ್, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಂ. ಶಿವಪ್ಪ, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಸಿ.ಬಿ. ರವಿ ಮತ್ತಿತರರು ಭಾಗವಹಿಸಿದ್ದರು.

ನಂದೀಶ್ ಪ್ರಾರ್ಥಿಸಿದರು. ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು.

## ಸುನೀತಾ ಪ್ರಕಾಶ್ ಕಥೆಗೆ ಪ್ರಥಮ ಸ್ಥಾನ



ದಾವಣಗೆರೆ, ನ. 29- ಕನ್ನಡದ ಸಾಹಿತಿ ವ್ಯಾಸರಾಯ ಬಲ್ಲಾಳ ಅವರ ಶತಮಾನೋತ್ಸವದ ಪ್ರಯುಕ್ತ ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಮತ್ತು ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಿಂದ ಏರ್ಪಡಿಸಿದ್ದ ಕಥಾ ಸ್ಪರ್ಧೆಯಲ್ಲಿ ನಗರದ ಯುವ ಬರಹಗಾರರಾದ ಶ್ರೀಮತಿ ಸುನೀತಾ ಪ್ರಕಾಶ್ ಅವರ ಪದ್ದವ್ವ ಮತ್ತು ಕೌದಿ ಕಥೆಗೆ ಪ್ರಥಮ ಸ್ಥಾನ ಲಭಿಸಿದೆ. ಇತ್ತೀಚೆಗಷ್ಟೇ ಸುನೀತಾ ಅವರ ಒಂದು ಕಥೆ ರಾಜ್ಯಮಟ್ಟದಲ್ಲಿ ಎರಡನೆಯ ಸ್ಥಾನ ಪಡೆದಿತ್ತು.

## ನಗರದ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಶ್ರೀ ವರಸಿದ್ಧಿವಿನಾಯಕ ದೇವಸ್ಥಾನದಲ್ಲಿ ಇಂದು ಸಂಜೆ 7 ಗಂಟೆಗೆ ಸಂಕಷ್ಟಿ ಹಾಗೂ ಕಾರ್ತಿಕೋತ್ಸವ ನಡೆಯಲಿದ್ದು, ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಅವರು ದೀಪ ಹಚ್ಚುವುದರ ಮೂಲಕ ಉದ್ಘಾಟಿಸಲಿದ್ದಾರೆ ಎಂದು ಟ್ರಸ್ಟಿ ಜಂಬಿಗಿ ರಾಧೇಶ್ ತಿಳಿಸಿದ್ದಾರೆ.


## ಗ್ರೇ ಪ್ಯಾರೋಟ್ ಕಳೆದಿದೆ



ಈ ಪಕ್ಷಿಯು ಸುಳಿವು ಸಿಕ್ಕವರು ಮತ್ತು ಪಕ್ಷಿಯನ್ನು ತಂದು ಕೊಟ್ಟವರಿಗೆ ಬಹುಮಾನ ಕೊಡಲಾಗುವುದು.

ಸಂಪರ್ಕಿಸಿ:

92432 24551, 98442 22057





